foam of wrath hatred and isolence and consider things with clear and pure mind. Then only it can be understood that those Hitler and Mussolini and those Churchill and Amery are merely tools like tanks and aeroplanes. The British Empire had been cast and modelled even before Churchill was born. Before Amery came to power have the British aware of thought of giving up India because there was more available for the place of This sport, which is that power that casting audio Chamberlain as blunt weapon took up Churchill the dumpor sword? Which is the power that caused Edward VIII to lay down his Crown? It is the imperialistic power. It is the traditional policy. That framework alone continues; its executives only come and go. This being so, what is to be removed in the system. Allowing the system to continue and talking up the question of punishing its executive was like committing the blunder of catching monkeys instead of cutting down the forest. Hitler is the father of Nazism If to-day in an air-raid, a bomb were to fall on his head he alone will die, but Nazism will not die. So-morrow Goering will take the place of Hitler. If he too falls a victim to an air attack Roosevelt might become the "Hitler" the day after. Thus in terms of the world tyrant "Hitler" will continue to the last German. What is the meaning of this? There is nothing whatsoever in the individual. Everything lies in the harmful system. We must be out to destroy that system and not any individual. After completely dissecting the Nazi Germany let Hitler be brought to London and be a instated Prime - minister. May he not turn out to be another Churchill. If you treat the enemy OF his soul you can kill him with that very sword Manu Smriti, now the foremost Pacifist leader and deadly enemy of Communism was in his young extreme communist himself. Mr. Jinnah was at one time one of the foremost Congress Leaders. This, in other words, means that an individual matters in not an 'item'. He becomes a strong or a weak weapon of it as he grows strong or weak. If a stone is thrown at you, you will not be contented with breaking it to

pieces. You wil search for the person who has thrown it at you. In like manner, it is no good punishing such individuals as Churchill, Hitler etc. who are merely tools of certain abominable policies. If those polices are áradicated there remains no question of punishing the creatures of those polices separately. Yet, have not the Allied leaders declared that it is one of their aims to punish such rebels as Hitler, Mussolini etc. after the war? Their avowal has not much value. In this respect, the view of the Germans and the Japanese who have not set prices on the heads of Churchill and Roosevelt seems right. In no national policy is there such precious truth as that in Gandhiji's creed viz. "Forget the wrong. Forgive the wrong doer" This is a fact of which we may be proud. From the civilised point of view, the áradication of the cause of offence is death of the offender himself. If the offender alone is killed it is as bad as committing another offence. Therefore, for the establishment of world peace, there should be purification of heart and not the spirit of vengeance.

31/

the spirit of vengeance.

of world peace, there should be purification of heartsand not
on committing another offence. Therefore, for the establishment
offender himself. If the offender alone is killed it is as bad
view, the eradication of the cause of offence is death of the
is a fact of which we may be proud. From the civilized point of
spread via. "Forget the wrong. Forgive the wrong doer" This
policy is there such precious truth as that in Gandhiji's
heads of Churchill and Roosevelt seems right. In no national
of the Germans and the Japanese who have not set prices on the
art? Their avowal has not much value. In this respect, the view
time to punish such rebels as Hitler, Mussolini etc. after the
let, have not the Allied leaders declared that it is one of their
passion of punishing the creatures of those putches separately.
olicies. If those polices are eradicated there remains no
Churchill, Hitler etc. who are merely tools of certain abominable
in like manner, it is no good punishing such individuals as
ieces. You will search for the person who has thrown it at you.

13-6-1944

Please see pages 8 to 11

READ &
Advertise in
NAVAYUGA
UDIPI

ಪುರೋಗಾಮಿ ಮಾಸಪತ್ರಿಕೆ
ಪ್ರ ಕಾ ಶಿ ನಿ
ಉ ಡು ಪಿ

1906] RECORD OF OVER 38 YEARS. [1944
THE CANARA BANKING CORPORATION LIMITED,
UDIPI

ANTARANGA

ವಾರ ಭವಿಷ್ಯ

ತಾ. ೧೩-೬-೪೪ರಿಂದ ೧೯-೬-೪೪

೦

ಮೇಷ—ಕಳೆದ ವಾರಕ್ಕಿಂತ ಈ ವಾರವು ನಿಮಗೆ ಸ್ವಲ್ಪ ದುಃಖದಾಯಿಯಾಗುವದು. ಜನಾನುರಾಗವನ್ನು ಸಂಪಾದಿಸುವಿರಿ. ಹಣದ ತಾಪತ್ರಯವು ಕಡಿಮೆಯಾಗುವದು. ಆದರೆ ಬಂಧು ಕಲಹ, ಆತ್ಮೀಯರಲ್ಲಿ ಮನಸ್ತಾಪ, ದುರ್ಜನರ ಸಂಗದಿಂದ ಅನಿಷ್ಟವೊದಗಲಿದೆ. ತಾ. 13. 16. 17 ಈ ದಿನಗಳು ಸುಖೇಷ್ಟದಾಯಿಗಳು.

ವೃಷಭ—ಉತ್ಪತ್ತಿಗಿಂತ ದ್ವಿಗುಣ ವ್ಯಯವಿದೆ. ಚಿಲ್ಲರೆ ವಾತಿನ ಸಂಬಂಧ ಕಲಹವಾಗಲಿದೆ. ಸ್ಥಾನಗಳಿಗೆ ಧಕ್ಕೆಯೊದಗೀತು. ಆದರೂ ಉತ್ಸಾಹ ಧೈರ್ಯಗಳು ಹೆಚ್ಚುವವು. ನಷ್ಟವಾದ ಧನ ವಸ್ತುಗಳೂ ಲಭಿಸಲಿವೆ. ತಾ. 16. 17. ಮಾತ್ರ ನಿಶೇಷ ಖರ್ಚಿನ ದಿನಗಳು.

ಮಿಥುನ—ಮನದಿಚ್ಛೆಯು ನಿರಾತಂಕದಿಂದ ಕೊನೆಹೊಂದೀತು. ಖರ್ಚಿನ ಮಟ್ಟಿಗೆ ಧನಾದಿಗಳು ಲಭಿಸುವವು. ರಾಜಕೀಯ ರಂಗದಲ್ಲಿ ಪರಾಜಯದ ಸಂಭವವಿದೆ. ವಾತ ಮತ್ತು ಉಷ್ಣ ಇವುಗಳ ಆಧಿಕ್ಯದಿಂದ ಆರೋಗ್ಯವು ಕೆಡಲಿದೆ. ತಾ. 13. 18. 19. ಈ ದಿನಗಳು ಒಳ್ಳೆಯವಲ್ಲ.

ಕರ್ಕಾಟಕ—ನಿಮ್ಮ ಪರಿಶ್ರಮಕ್ಕಿಂತಲೂ ಮಿಗಿಲಾದ ಫಲವು ದೊರೆಯುವದು. ಕೈಗೊಂಡ ಕಾರ್ಯಗಳು ವಿಘ್ನದಿಂದ ಕೊನೆಗಾಣುವವು. ಆದರೆ ಮನಸ್ಸಿಗೆ ಮಾತ್ರ ನೆಮ್ಮದಿಯಿರದು. ಅಕಸ್ಮಾತ್ ಅನರ್ಥಗಳು ಒದಗಲಿವೆ. ತಾ. 13. 14. 15. ಈ ದಿನಗಳಲ್ಲಿ ಸ್ವಲ್ಪ ಜಾಗರೂಕರಾಗಿರಿ.

ಸಿಂಹ—ದೈಹಿಕ ಶ್ರಮ ವನ್ನು ಗಣಿಸದೆ ದುಡಿಯುವಿರಿ. ಹೆಚ್ಚಿನ ಧನವು ಸತ್ಕಾರ್ಯಗಳ ಸಲುವಾಗಿ ಮತ್ತು ರಾಜಕೀಯ ಕಾರ್ಯ ನಿಮಿತ್ತ ವ್ಯಯವಾದೀತು. ಸ್ತ್ರೀ ಧನ ಲಭಿಸುವ ಯೋಗವಿದೆ ವಾಕ್ಕಲಹ ಭಯವು ವಿಶೇಷವಿರುವುದರಿಂದ ತಾ. 14. 15. 16. 17ರಲ್ಲಿ ಜಾಗರೂಕರಾಗಿರಿ.

ಕನ್ಯಾ—ಲೇವಾದೇವಿ ನಿಮಿತ್ತ ಕೋರ್ಟು ಮನೆಗೆ ತಿರುಗುವ ಪ್ರಸಂಗವುಂಟಾದೀತು. ನೌಕರಿ ಭಾಗದಲ್ಲಿ ಅತೃಪ್ತಿಯುಂಟಾಗಲಿದೆ. ಪರಿಶ್ರಮಕ್ಕನುಗುಣವಾದ ಫಲ ದೊರೆತರೂ ಅಲ್ಲಸಲ್ಲದ ಖರ್ಚನ್ನು ಮಾಡಿ ಕೈ ಬರಿದು ಮಾಡಿಕೊಳ್ಳುವಿರಿ. ತಾ. 14ರಿಂದ 17ರ ವರೆಗಿನ ದಿನಗಳಲ್ಲಿ ಇಷ್ಟಾರ್ಥಕ್ಕೆ ಹಾನಿಯಿರದು

ತುಲಾ— ಮುಂಚಿಗಿಂತ ನಿಮ್ಮ ಪರಿಸ್ಥಿತಿ ಈ ವಾರದಲ್ಲಿ ಆದಷ್ಟೋ ಸುಧಾರಿಸಲಿದೆ. ಮುಖ್ಯವಾಗಿ ಹಣದ ಬಿಕ್ಕಟ್ಟು ಕಡಿಮೆಯಾಗುವದು. ವಿದ್ಯೋಪಜೀವಿಗಳಿಗೆ ಸಾಕಷ್ಟು ಧನಾಪ್ತಿಯಿದೆ. ಧರ್ಮದ ಕಡೆಗೆ ದೃಷ್ಟಿ ಹರಿಯುವುದು. ಸ್ಥಾನ ಮಾನಗಳಿಗೆ ಕಿಂಚಿತ್ ಅಪಾಯವಿದೆ ತಾ. 13. 18. 19 ಒಳ್ಳೆಯವಲ್ಲ.

ವೃಶ್ಚಿಕ—ದುರ್ದೈವವು ಬಲವತ್ತರವಾಗಿ ಕಾಡಲಿದೆ. ಚಿನ್ನವನ್ನು ಮುಟ್ಟಿದರೂ ಮಣ್ಣಾಗುತ್ತಿರುವದು. ಅನಾರೋಗ್ಯದ ಭಯವು ವಿಶೇಷವಾದೀತು. ಮನೆಯವರಲ್ಲಿ ಪರಸ್ಪರ ಕಚ್ಚಾಟವುಂಟಾಗಲಿದೆ. ವ್ಯಾಪಾರಿಗಳಿಗೆ ವಿಶೇಷ ನಷ್ಟವುಂಟಾಗಬಹುದು. ತಾ. 13. 14. 15 ಭಯಹಳ ಅಪಾಯಕಾರಿ ದಿನಗಳು.

ಧನು—ನಿಮ್ಮ ಯತ್ನಕ್ಕೆ ದೈವ ಬಲವು ಸಾಕಷ್ಟಿಲ್ಲದ ಕಾರಣ ಬಹ್ವಂಶ ನಿಮ್ಮ ಮನೋರಥವು ನೆರವೇರುವಂತಿಲ್ಲ. ಕಜ್ಜಿ ಹುಣ್ಣು ವಗೈರೆ ತ್ವಗ್ ರೋಗದಿಂದ ವಿಶೇಷವಾಗಿ ಬಳಲುವಿರಿ. ಅಂತೂ ಪರಾಪೇಕ್ಷೆಯಿಲ್ಲದೆ ನಿಮ್ಮ ದಿನಗಳನ್ನು ಕಳೆವಿರಿ. ತಾ 13. 18. 19. ಅನುಕೂಲ ದಿವಸಗಳು

ಮಕರ—ದೇಹಶ್ರಮದಿಂದ ಜೀವಿಸತಕ್ಕ ಕಿಂಕರ ವರ್ಗದವರಿಗೆ ನಿಮಗೆ ಈ ವಾರವು ಬಹಳ ಕಷ್ಟವಿದೆ. ದಿನಯಾಪನೆಯು ಬಹಳಕಷ್ಟಕ್ಕೆಡೆಯದು. ಆದರೂ ದೈವ ದೃಷ್ಟಿಯು ಸ್ವಲ್ಪ ನಿಮ್ಮ ಮೇಲಿರುವುದರಿಂದ ತಾ 14.15. ಈ ದಿನಗಳಲ್ಲಿ ಮನಸ್ತೃಪ್ತಿಕರವಾದ ಫಲವನ್ನು ಪಡೆವಿರಿ.

ಕುಂಭ—ಆಗಕ್ಕಿದ್ದರೂ ಭೋಗಕ್ಕಿರದೆಂಬ ಗಾದೆಯಂತೆ ಇದ್ದುದನ್ನು ಅನುಭವಿಸ ಯೋಗ್ಯತೆಯು ನಿಮ್ಮಲ್ಲಿಲ್ಲವು. ಶತ್ರುಗಳು ಶರಣಾಗತರಾದರೂ ನಿಮ್ಮ ಮನಸ್ಸು ಚಿಂತೆಯಿಂದಲೇ ಕೂಡಿರುವದು. ತಾ. 14. 15. 18. 19 ಈ ದಿನಗಳಲ್ಲಿ ಅಂತಃಕಲಹ, ಧನ್ನ ಮಾನಗಳಿಗೆ ಹಾನಿಯೊದಗೀತು.

ಮೀನ—ನಿರುದ್ಯೋಗದಿಂದ ಮುಕ್ಕಾದೀರಿ. ಗೃಹೋಪಕರಣಗಳು ಪೂರ್ಣವಿರುವುದರಿಂದ ದಿನವನ್ನು ಸುಖದಿಂದ ಕಳೆವಿರಿ. ಮನಸ್ಸು ಹರಿಣದಂತೆ ಜಂಚಲವಾದೀತು. ಮೇಲಾಧಿಕಾರಿಗಳ ಕೋಪಕ್ಕೆ ಗುರಿಯಾಗುವ ಸಂಭವವಿದೆ. ತಾ. 13. 16. 17 ಒಳ್ಳೆಯದಲ್ಲ.

ಅಂತರಂಗ
ANTARANGA

ವಾರ ಪತ್ರಿಕೆ • Weekly

ಸಂಪುಟ ೧೨. ಸಂಚಿಕೆ ೩೦೨.

Vol. 12. No. 302.

13-6-1944

ಸಂಪಾದಕರು:
ಕೆ. ಎಚ್. ಶೆಟ್ಟ
ಎಂ. ವಿ. ಹೆಗ್ಡೆ.

ಸಲಹೆಗಾರರ ಮಂಡಲ:
ಶ್ರೀಗಳಾದ ಬಿ. ವಾಸುದೇವ ರಾವ್ ಬಿ. ಎ., ಬಿ. ಎಲ್.; ಕೊರಡ್ಕಲ್ ಶ್ರೀನಿವಾಸ ರಾವ್; ಪಿ.ವಿ. ಉಪಾಧ್ಯಾಯ ಬಿ.ಎ.ಎಲ್.ಎಲ್.ಬಿ.; ಪಿ ದಯಾನಂದ ನಾಯಕ್, ಬಿ. ಎ. ಎಲ್. ಎಲ್.ಬಿ.; ಎಚ್.ಆರ್.ನಾಯಕ್; ಕಟಪಾಡಿ ಶ್ರೀನಿವಾಸ ಶೆಣೈ, ವಿಶಾರದ.

ತಾಳ—ಮೇಳ



'ಫ್ರಾನ್ಸ್ ಆಕ್ರಮಣಾರಂಭವೇ ಒಂದು ಆಶ್ಚರ್ಯವಾಗಿತ್ತು; ಇನ್ನು ಹೋರಾಟದಲ್ಲೂ ಅಂತಹ ಆಶ್ಚರ್ಯಗಳನ್ನು ನಿರ್ಮಿಸಲಿರುವೆವು'—ಚರ್ಚಿಲ್.

ಹೆಜ್ಜೆ ಹಿಂದಿಟ್ಟರೆಂಬ ಅದೊಂದು ಆಶ್ಚರ್ಯ ಮಾತ್ರ ಬೇಡ.

o

'ಜಾಪಾನರೊಡನೆ ಹೋರಾಡುವ ರಲ್ಲಿ ಚೀನೀಯರು ಅರೆ ಮನಸ್ಸು ತೋರಿಸುತ್ತಿದ್ದಾರೆ'—ರಶ್ಯನ್ ಪತ್ರಿಕೆಯ ಆರೋಪ.

ಬಾಕಿ ಅರೆಮನಸ್ಸು ಪ್ರಾಯಶಃ ಮಿತ್ರರ ಕಡೆಗೆ ಹೋಗಿರಬೇಕು.

o

'ಹಿಟ್ಲರನು ಅವಿಲ ಯುರೋಪಿನ ರಂಗದ ಮುಖ್ಯ ಸೇನಾನಿತ್ವ ವಹಿಸಿ ಫ್ರಾನ್ಸಿಗೆ ಹೋಗಿದ್ದಾನೆ'—ಜರ್ಮನ್ ಗುಪ್ತ ಚಳವಳಗಾರರ ವಾರ್ತೆ.

ದ್ವಿತೀಯರಂಗ

4000 ಹಡಗಗಳು ಮತ್ತು ಹಲವು ಸಾವಿರ ಕಿರಿನಾವೆಗಳ ಮೂಲಕ ಬ್ರಿಟಿಷ್ ಕಾಲುವೆಯ ಇಂಗ್ಲಾಂಡು ಕರಾವಳಿಯಿಂದ ಹೊರಟ ಅಪಾರ ಮಿತ್ರಸೇನೆ ಫ್ರೆಂಚ್ ಜೂನ್ ತಾ. 6ನೇ ಅತಿಮುಂಜಾನೆ ಕರಾವಳಿಯಲ್ಲಿಳಿದಿದೆ. ಗಾಳಿಕೊಡೆಯವರೂ ಅಧಿಕ ಸಂಖ್ಯೆಯಲ್ಲಿ ಹಿಟ್ಲರನ ಅಟ್ಲಾಂಟಿಕ್ ರಕ್ಷಣಾಗೋಡೆಯ ಹಿಂಬದಿಗಿಳಿದಿದ್ದಾರೆ. ಆಕ್ರಮಣ ಪೂರ್ವದಲ್ಲಿ 2500 ವಿಮಾನಗಳು 12 ಘಂಟೆ ಅವಿಶ್ರಾಂತ ಧಾಳಿನಡಿಸಿದ್ದವು. ಅತ್ಯದ್ಭುತ ಹೋರಾಟ ವೀಗ ನಡೆಯುತ್ತಿದೆ.

ಚರ್ಚಿಲ್ಲರೂ ಕಾಲುವೆ ದಾಟಿ ಫ್ರಾನ್ಸಿನಲ್ಲಿ ಡೇರೆ ಹೊಡೆಯುವದಗತ್ಯ.

o

'ಇನ್ನೊಂದೆಡೆಯಿಂದ ರಶ್ಯವೂ ಜರ್ಮನಿಯ ಮೇಲೆ ಮುಂದೊತ್ತುವದೆ?'—ಎಲ್ಲರ ಆತುರ.

ಜರ್ಮನಿಗೆ ಹಿಂದೊತ್ತಲು ಒಂದು ದಿಕ್ಕು ಉಳಿಯಬೇಕೆಂಬುದಕ್ಕಾಗಿ ಹಾಗೆ ಮಾಡದಿರಲೂ ಬಹುದು.

o

'ತನ್ನ ಮಿತ್ರ ರಾಷ್ಟ್ರದ ರಕ್ಷಣೆಗಾಗಿ ಹಾಗೂ ಮುಂದಾಲೋಚನೆಯಿಂದ ಜಾಪಾನು ಹೊಸಾಕ್ರಮಣ ಹೂಡುವ ಸಂಭವವಿದೆ' ಮತ್ತೊಂದು ಆತುರ.

ಅಂತೂ ದ್ವಿತೀಯ ರಂಗದ ಬಳಿಕ ತೃತೀಯ, ಚತುರ್ಥ, ಪಂಚಮ್ಯಷಷ್ಠಿ .....ಎಲ್ಲವೂ ಬಂದು..... ಕೊನೆಗಾವುದು ಅಮಾವಾಸ್ಯೆಯೋ ಹುಣ್ಣಿಮೆಯೊ?

'ಭುವನೇಂದ್ರ' ಔಷಧಗಳನ್ನೇ ಉಪಯೋಗಿಸಿರಿ
ಭುವನೇಂದ್ರ ಪ್ರೊಡಕ್ಟ್ಸ ಲಿಮಿಟೆಡ್, ಕಟಪಾಡಿ.

ಕೈಗನ್ನಡಿ



ದ್ವಿತೀಯ ರಂಗಾರಂಭದಿಂದ—

1. ರಾಜ ಭಕ್ತರ ಬಾಯಿ ತುಪಾಕಿ ಸಿಡಿತವು ಫ್ರಾನ್ಸ್ ಯುದ್ಧ ಯೋಧರ ಗನ್ ಪ್ರಯೋಗವನ್ನೂ ತೀವ್ರತೆಯ ಮಟ್ಟಗೆ ವೀರಿದೆ.

2. ಫ್ರಾನ್ಸಿನ ಸರಬರಾಯಿ ಸಂದುಗಳಿಗಿಂತ ವೇಗವಾಗಿ ಬ್ರಿಟಿಷ್ ದ್ವೇಷಿಗಳ ನರನಾಡಿ ಸಂದುಗಳು ಕುಸಿಯುತ್ತಿವೆ.

3. ಎಲ್ಲರ ಧಮನಿಯ ರಕ್ತ ಸಂಚಾರವೂ ಆ ಇಂಗ್ಲಿಷ್ ಕಾಲುನೆಯಂತಾಗಿದೆ

4. ಪುರಾಣಗಳಲ್ಲಿ ಹೇಳಿರುವ ಕಲ್ಕ್ಯವತಾರನೆಂದರೆ ಮಿ. ಚರ್ಚಿಲ್ಲರೆಂಬುದನ್ನು ಸಕಾರಣವಾಗಿ ವಾದಿಸುವ ಪುಸ್ತಕಗಳು ಸಂಯುಕ್ತ ವೈದಿಕ ಮಂಡಲಿಯಿಂದ ಸದ್ಯದಲ್ಲೇ ಪ್ರಕಟವಾಗಬಹುದು.

5. ಕಳದೈದು ವರುಷಗಳಿಂದ 'ಸೊಳ್ಳೆ ಮೀಸೆ'ಯಿಟ್ಟವರು ಆದನ್ನು ಬೋಳಿಸಿಕೊಳ್ಳಬಹುದು.

6. ಚರ್ಚಿಲ್ ಮಾದರಿಯ ಸಿಗರ್ ಕೊಳವೆಗಳ ಉಪಯೋಗವನ್ನೇ ಡಾಕ್ಟರುಗಳೂ ಹಲವು ಜಾಡ್ಯಗಳಿಗೆ ಶಿಫಾರಸು ಮಾಡಬಹುದಾದ್ದರಿಂದ ಅವುಗಳ ಬೆಲೆ ಅಧಿಕಾಧಿಕ ಏರುವ ಸಂಭವವಿದೆ.

7. ಆಂದು ಇಂಗ್ಲಾಂಡನ್ನು, ಇಂದು ಇಂಗ್ಲಾಂಡಿನ ಪ್ರತಿಷ್ಠೆಯನ್ನು ಉಳಿಸಿಕೊಟ್ಟ 'ಬ್ರಿಟಿಷ್ ಕಾಲುವೆ'ಯ ಚಿತ್ರವು ಯುದ್ಧಾನಂತರದ 'ಯೂನಿಯನ್ ಜೇಕ್'ನಲ್ಲಿ ಸೇರಬಹುದು.

8 ಯುದ್ಧಾನಂತರ ಹಿಂದುಸ್ಥಾನದಲ್ಲಿ ಬ್ರಿಟಿಷರಿಂದ ಸ್ಥಾಪಿಸಲ್ಪಡುವ 'ಆಂಬೇಡ್ಕರ್-ಖಾನ್'ನೂನ್ ಸರಕಾರವು ತನ್ನ ಮೊದಲ ಓರ್ಡಿನೆನ್ಸಾಗಿ 'ಹಿಂದುಸ್ಥಾನದಲ್ಲಿ ಜನಿಸುವ ಪ್ರತಿಯೊಂದು ಚೊಚ್ಚಲ ಮಗುವಿಗೂ 'ಈಸೆನೋವರ್' ಹೆಸರಿಡಬೇಕು' ಎಂದಾಜ್ಞೆ ಹೊರಡಿಸಬಹುದು.

9 ಗಾಂಧಿಜೀ ಒಂದು ವರುಷ ಮೌನಧಾರಣೆ ಮಾಡುವ ಸಂಭವವಿದೆ.

ಕೊಳವೇ ಬತ್ತಿ ಹೋಗಿದ್ದರೆ ನಳ ತಿರುಗಿಸಿದಾಗ ನೀರು ಬಾರದು; ಹೃದಯವೇ ಒಣಗಿದ್ದರೆ ಒಯ್ಯಾರ ವಾಕ್ಪ್ರವಾಹದಿಂದ ಒಲವು ಮೂಡದು.

೦೦ ೦೦ ೦೦

ನರ್ತಕಿ ಕುಣಿಯು ಬಲ್ಲಳು ಅಥವಾ ಕುಳಿತು ಹೊಗ ಬಲ್ಲಳು ಹೊರತು ಮೈಲುಗಟ್ಟಲೆ ನಡೆಯಲಾರಳು. ಆರಾಧ್ಯ ಗೊಂಬೆಗಳಿಗೆ ಅತಿರೇಕ ವರ್ತನೆ ಗೊತ್ತು, ಅಥವಾ ಆಶ್ರಯದಲ್ಲಿರುವದು ಗೊತ್ತು ಹೊರತು ಸಾಮಾನ್ಯ ವ್ಯವಹಾರ ವರಿಯದು

೦೦ ೦೦ ೦೦

ತಲೆಯಲ್ಲಿರುವಾಗ ತೈಲ ಬಾಚಣಿಗೆಗಳ ಪೂಜೆ ಪಡೆದ ಕೂದಲಿಗೆ ಕತ್ತರಿಸಿ ಬಿದ್ದ ಮೇಲೆ ಧೂಳೇ ಗತಿ; ಸ್ಥಾನಾಪನ್ನರಾಗಿರುವಾಗ ಲಂಚ ಕಾಣಿಕೆ ಪಡೆವ ಅಧಿಕಾರಿಗಳಿಗೂ ಕೊನೆಗದೇ ಸ್ಥಿತಿ.

೦೧ ೦೦ ೦೦

ನಾಡೀ ಸಂಚಾರದಲ್ಲಿರಬೇಕಾದ ರಕ್ತ ಮೈ ಮೇಲೆ ಕಾಣಿಸಿಕೊಂಡರದು ಅನಾಹುತ; ಅಂಕರಂಗದಲ್ಲಿರಬೇಕಾದ ಗೂಢ ವಿಷಯ ಬಯಲಿಗೆ ಬಿದ್ದರೆ ಅದೂ ಅನಾಹತವೇ.

೦೦ ೦೦ ೦೦

ತುಂತುರು:

ಸಾಂಗವಾಗಿ ನೆರವೇರಿದ ಮೇಲೆ ಮಂಗಲ ಗೀತೆ; ಸಮಪಾಲು ಬಾಕಿಯಿರುವಾಗಲೇ ಆಹಾಡುಬೇಡ. ಪೂರ್ಣ ತುಂಬಿದ ಮೇಳೇನೇ ಉಪದೇಶಕ್ಕಿಳಿ; ಅರೆ ಪಕ್ವಸ್ಥಿತಿಯಲ್ಲೇ ಅಭ್ಯಸಿಬೇಡ.

೦೦ ೦೦ ೦೦

ಹಾಯಿಯಿದ್ದ ನಾವೆ, ಹಗುರ ಬುದ್ಧಿಯವನು ನಾವ್ಯ ಗಾಳಿ ಬೀಸಿದತ್ತ!

೦೦ ೦೦ ೦೦

ದಂಗೆಯೇಳಲಾಗದಿದ್ದರೆ ಡಂಗುರ ಬಾರಿಸಿ ಹೇಳು:-ದಂಗು ಬಡಿದು ಸ್ತಂಭಿತನಾಗಬೇಕೆ? ದುಡಿದು ಸಾಧಿಸಲಾಗದಿದ್ದರೆ ದೂರು ವಾದಿಸು-ದುಮ್ಮಾನಗೊಂಡು ತಣ್ಣಗಿರಬೇಕೆ?

೦೦ ೦೦ ೦೦

ಔಷಧದ ಬದಲಿಗೆ ಅಭರಣ ಸ್ವೀಕರಿಸಿದರಾಗದು; ಆಸಕ್ತಿಯ ಬದಲಿಗೆ ಆಡಂಬರ ವಹಿಸಿದರಾಗದು.

೦೦ ೦೦ ೦೦

ವೈಯಲ್ಲಿ ನೀರು ಬಂದರೆ ಪುಷ್ಟಿ ಹೊಂದಿದಂತಲ್ಲ; ಧನವಾಳು ಪ್ರದರ್ಶನವೊಂದು ಧೀರತ್ವವಲ್ಲ.

೦೦ ೦೦ ೦೦

ತೊಟ್ಟಿಲು ಬಿಡದ ಮಗು ಮೆಟ್ಟಿಲು ಹತ್ತಲಾರದು; ಸಂಕೋಚ ಬಿಡದ ಮನುಷ್ಯ ಸಾಹಸಿಯಾಗಲಾರ.

೦೦ ೦೦ ೦೦

ಮೀಸೆ ಬೆಳೆಸುವವನೂ ಬಾಯಿಗಿಳಿಯದಷ್ಟು ಕತ್ತರಿಸಿಕೊಳ್ಳುತ್ತಾನೆ. ಆಸೆ ಬೆಳೆಸುವವನೂ ಆಧ್ಯತೆಗೆ ಭಂಗಬಾರದಷ್ಟು ಕಡಿದುಕೊಳ್ಳಬೇಕು.

೦೦ ೦೦ ೦೦

ದನದ ಕಣ್ಣಿಗೊಂದು ಹಸುರು ಕನ್ನಡಕ ವಿಡು-ಒಣ ಹುಲ್ಲನ್ನೂ ಹಸಿ ಹುಲ್ಲೆಂದು ಜಗಿದೀತು. ಮೂಢನ ಮನಸ್ಸಿಗೆ ನಿನ್ನೊಲವನ್ನು ತುರುಕ್ಕಿಸು-ದಾಸ್ಯವನ್ನು ದಾನವೆಂದೇ ಸ್ವೀಕರಿಸಿಯಾನು.

೦೦ ೦೦ ೦೦

ಧೂಳೆಬ್ಬಿಸಿಕೊಳ್ಳಲು ದರಗು ಚಾಪೆ ಹಾಸಿದವರು ಮಲಗಲು ಹಾಸಿಗೆ ಕೊಟ್ಟಾರು; ದೋಷ ನಿವಾರಣೆಗಾಗಿ ಕಾಠಿಣ್ಯ ಪ್ರದರ್ಶಿಸಿದವರ್ಯ ಸದ್ವರ್ತನೆಗೆ ಸಹಾಯಕೊಟ್ಟಾರು.

೦೦ ೦೦ ೦೦

ಕಾಲು ಜಾರಿದರೂ ವಸ್ತ್ರ ಜಾರಬಾರದು; ಗತಿಗೆಟ್ಟರೂ ಮತಿಕೆಡಬಾರದು.

ನಿಮ್ಮ ಪ್ರಶ್ನೆಗೆ ನಮ್ಮ ಉತ್ತರ



ಶ್ರೀ. ಸಿ. ಕೆ. ಎಸ್.,
ಮಂಗಳೂರು.

''ದೀರ್ಘಕಾಲದ ಬಾಯಾರಿಕೆಯಾಗಿದ್ದ ದ್ವಿತೀಯರಂಗವನ್ನು ಮಿತ್ರಸೇನೆಗಳು ಫ್ರಾನ್ಸಿನಲ್ಲಾರಂಭಿಸಿದ ತಾ| 6ನೇ ರಾತ್ರಿಯಲ್ಲೇ ಚಕ್ರವರ್ತಿಗಳು ತನ್ನ ಜನತೆಗಿತ್ತ ಪ್ರೋತ್ಸಾಹದಾಯೀ ಭಾಷಣದಲ್ಲಿ ನುಡಿದಿದ್ದ ಒಂದು ಆವೋಹ ಹಾಗೂ ಅಪೂರ್ವ ಜಾಣ್ನುಡಿಯ ಕಡೆಗೆ ನಿಮ್ಮ ಲಕ್ಷ್ಯ ಹೋಗಿದೆಯೆ? ''ನನ್ನ ಸಂಕಲ್ಪವನ್ನು ದೇವರು ಈಡೇರಿಸಿಕೊಡಲಿ ಎಂದು ನಾವು ಕೇಳುವದಲ್ಲ; ದೇವರ ಸಂಕಲ್ಪವನ್ನು ನಾನೇ ನೆರವೇರಿಸಿಕೊಡಲಿದ್ದೇನೆ. ತನ್ನ ಉಚ್ಚ ಧ್ಯೇಯ ಪೂರ್ತಿಮಾಡಿಕೊಳ್ಳುವ ಉಪಕರಣವಾಗಿ ಜೇವರು ನಮ್ಮ ರಾಷ್ಟ್ರ ಮತ್ತು ಸಾಮ್ರಾಜ್ಯವನ್ನು ಉಪಯೋಗಿಸಿಕೊಳ್ಳುತ್ತಿದ್ದಾನೆಂದು ನಂಬುವ ಧೈರ್ಯ ನಮ್ಮದು'' ಎಂದಿದ್ದಾರೆ. ಇದಕ್ಕಿಂತ ಮಿಕ್ಕಿದ ದೇವತಾ ಆರಾಧನೆ ಇನ್ನೊಂದಿರಬಹುದೆ?''

ಈ ರೀತಿ, ದೇವನಷ್ಟು ಪರಾವಲಂಬಿಯಾಗಿರುವ ಮನುಷ್ಯ ಇನ್ನೊಬ್ಬ ನಿದ್ದಾನೆಯೆ?

ಶ್ರೀ ಎಲ್.ಆರ್., ಶಿವೊಗ್ಗ.

''ಜೂನ್ ತಾ| 6ನೇ ಆತಿ ಮುಂಜಾನೆ—ನಮ್ಮ ದಕ್ಷಿಣ ಕನ್ನಡದ ಹಳ್ಳಿಗರ ಭಾಷೆಯಂತೆ ಕೋಳಿ ಕೂಗುವ ಹೊತ್ತಿಗೆ-ಉತ್ತರ ಫ್ರಾನ್ಸಿನಲ್ಲಿ ಅಪಾರ ಹಡಗ ದಳಗಳ ಮೂಲಕ ಅಗಾಧ ಮಿತ್ರಸೇನೆಯಿಳಿದು ದ್ವಿತೀಯರಂಗದ ಉದ್ಘಾಟನೆ ಮಾಡಿದೆಯಷ್ಟೆ? ಲೋಕ ಸ್ವಾತಂತ್ರ್ಯ ಸಾಹಸದ ಪ್ರಾರಂಭ ದಿನವಾದ 6ನೇ ತಾರೀಕನ್ನು ಪ್ರತಿವಾಸವೂ ರಜಾದಿನವಾಗಿ ಸಂಭ್ರಮದಿಂದ ಆಚರಿಸುವ ಏರ್ಪಾಡಾಗ ಬಾರದೇಕೆ?'

ಇದೇ ರೀತಿ ಚರ್ಚಿಲ್ ಜನ್ಮದಿನ-ಅಮೆರಿ ಅಧಿಕಾರ ಸ್ವೀಕಾರ ದಿನ—ಕ್ರಿಸ್ಮಸ್ ಹಾರಾಟ ದಿನ-ರುಸವೆಲ್ಟ್ ಕ್ಲಾಸಿಕ ದಿನ-ಗಾಂಧಿ ಕಾಹಿಲೆ ದಿನ, ಎಂದೆಲ್ಲಾ ಸಂತೋಷ ದಿನಗಳನ್ನಾಚರಿಸುವದರಲ್ಲೇ ವರುಷದ365 ದಿನಗಳೂ ಕಳೆಯವೇನು?

ಶ್ರೀ. ಸಿ. ಪಿ. ಪಿ. ನೀಲಗಿರಿ.

1) ''ಫ್ರಾನ್ಸಿನೊಳಗೆ ಮಿತ್ರ ಸೇನೆಗಳು ನುಗ್ಗಿರುವ ಈ ಕಾಲದಲ್ಲಿ ಹಿಟ್ಲರನು ಬರ್ಲಿನಿನಲ್ಲಿ ಕುಳಿತುಕೊಂಡು-ಅಂದು ಫ್ರಾನ್ಸ್ ಪತನ ಹೊಂದಿದೊಡನೆಯೇ ಇಂಗ್ಲಿಷ್ ಕಾಲುವೆದಾಟಿ ಇಂಗ್ಲಾಂಡಿನೊಳಗೆ ನುಗ್ಗಲು ತನಗೊದಗಿದ್ದ ಸುವರ್ಣ ಸಂದರ್ಭವನ್ನು ಕಳಕೊಂಡ ಪ್ರಮಾದಕ್ಕಾಗಿ ಕಣ್ಣೀರು ಸುರಿಸುತ್ತಿರಲಾರನೆ?''

ಆ ವಾರ್ತೆ ಬಂದಿಲ್ಲ; ಅವನು ಸ್ವತಃ ಫ್ರಾನ್ಸಿಗೆ ಹೋಗಿದ್ದಾನೆ ಎಂಬ ವಾರ್ತೆ ಮಾತ್ರ ಬಂದಿದೆ. ಪ್ರಾಯೆಶ; ಬರ್ಲಿನಿನಲ್ಲಿ ಕುಳಿತು ಕಣ್ಣೀರು ಸುರಿಸಿ ಇನ್ನು ಫಲವೇನು- ಹೋಗಿ ಇಂಗ್ಲಿಷ್ ಕಾಲುವೆಗೇನೇ ಬೀಳೋಣವೆಂದು ಮನಸ್ಸು ಮಾಡಿದನೇನೋ!

2 ''ಫ್ರೆಂಚ್ ಕರಾವಳಿಯಲ್ಲಿ ಹಡಗ ಮೂಲಕ ಹೋಗಿ ಸೇನೆಗಳು ಇಳಿದುದಕ್ಕಿಂತಲೂ ಫ್ರಾನ್ಸಿನ ದೊರದೊಳಗಡೆ ವಿಮಾನ ಗಾಳಿ ಕೊಡೆಯವರು ಬಹುಸಂಖ್ಯೆಯಲ್ಲಿ ಇಳಿಯಲು ಶಕ್ತರಾದುದು ಒಂದು ಅದ್ಭುತವೇ ಸರಿ. ಹಿಟ್ಲರಿನ ಕಾಲ ಕಿಳಿಯಿತಲ್ಲವೆ?''

ಕಾಲ ಕಳೆಯುವದು ಹೇಗೆ? ಹಿಟ್ಲರನಿಗೆ ಕಾಲವೀಗ ತಾನೇ ಬರಬೇಕು? ಆಕಾಶವೆಲ್ಲಿಯೂ ಆಲುಗಾಡುವದಿಲ್ಲ; ಎಲ್ಲಾ ಕಡೆಯು ಆಕಾಶವೂ ಇಲ್ಲಿಯಂತೆಯೇ. ಗಾಳಿ ಕೊಡೆಯವರನ್ನೊಮ್ಮೆಗೆ ಬರ್ಲಿನಿನಲ್ಲಿಯೂ ಇಳಿಸಬಹುದು; ಇಳಿದ ಮೇಲೆ ಉಳಿಯುವದೊಂದೇ ವಿಶೇಷ. ಆದ್ದರಿಂದ ಅವಸರಿಸಬೇಡಿ—ಇಳಿದವರ ಯೋಗಕ್ಷೇಮ ಸಮಾಚಾರ ಬಂದುಕೊಳ್ಳಲಿ.

ವಿ. ಪಿ. ಎಸ್. ಎಸ್.,
ಬೊಂಬಾಯಿ.

''ಪೋಪ್ ಗುರುಗಳ ಪ್ರಾರ್ಥನೆ ಹುಸಿಯಾಗಲಿಲ್ಲ. 'ಪವಿತ್ರ ನಗರ ರೋಮಿಗೆ ಯುದ್ಧ ಹಾನಿ ತಾಗಿಸುವವರು ಮಾತೃದ್ರೋಹಿಗಳಾಗುತ್ತಾರೆ' ಎಂದು ಅವರು ಕೊಟ್ಟ ಎಚ್ಚರಿಕೆ ಇಕ್ಕಂಡಡ ಯುದ್ಧ ತ್ರಮುಖರನ್ನೂ ಹೆದರಿಸಿರಬೇಕು. ಆದ್ದರಿಂದಲೇ ಜರ್ಮನರು ಪ್ರತಿಭಟನೆ ಕೊಡದೆ ರೋಮ್ ಕ್ಯಾಗಮಾಡಿದರಲ್ಲವೆ?''

ಹೀಗನ್ನುವದು ದೇಶರಕ್ಷಣಾ ಕಾನೂನಿನನ್ವಯ ಅಪರಾಧವಾಗಬಹುದೆಂದು ನಮ್ಮ ಊಹೆ. ಯಾಕೆಂದರೆ 'ಜರ್ಮನರು ಸದಿಚ್ಛೆಯಿಂದ ರೋಮನ್ನು ತ್ಯಜಿಸಿದುದಲ್ಲ. ಮಿತ್ರ ಸೇನಾನಿಗಳು ರೋಮಿನ ಮೇಲೆ ಹಾಕಿದ ಮುತ್ತಿಗೆಯು ಅಷ್ಟೊಂದು ಚಾತುರ್ಯ ಪೂರ್ಣವಿದ್ದುದರಿಂದಲೇ ಹಿಟ್ಲರನು ಪ್ರತಿಭಟನೆಗವಕಾಶ ದೊರೆಯದೆ ಹಿಂಜರಿಯಬೇಕಾಯಿತು'-ಎಂದು ಮೊನ್ನೆ ತಾನೇ ರುಸವೆಲ್ಟರಂದಿದ್ದಾರೆ. ನಿಮ್ಮ ವಾದವಿದಕ್ಕೆ ಪ್ರತಿಕೂಲವಾಗಿರುವದರಿಂದ ಸ್ವರಕ್ಷಣಾ ದೃಷ್ಟಿಯಿಂದ ಆವನ್ನು ಹಿಂಪೆಗೆದುಕೊಳ್ಳಲೆನ್ನುತ್ತೇವೆ.

ಶ್ರೀಮತಿ ಆರುಂಧತಿ, ಮಡಿಕೇರಿ.

''ಬೆಳೆದ ಬ್ರಹ್ಮಚಾರಿಗಳಿಂದಾಗುತ್ತಿರುವ ಅತ್ಯಾಚಾರಗಳನ್ನು ಈ ಮೊದಲು ಮಹಿಳಾ ವರ್ಗ ಮಾತ್ರವೇ ಅನುಭವಿಸುತ್ತಿತ್ತು. ಆದರೆ ಬ್ರಹ್ಮಚಾರಿಯೊಬ್ಬನಿಂದಾರಂಭಿಸಲ್ಪಟ್ಟ ಈ ಯುದ್ಧದಿಂದಾಗಿ ಕಳೆದ ಐದು ವರುಷಗಳಿಂದ ವರ್ಗ ಭೇದವಿಲ್ಲದೆ ಇಡೀ ಪ್ರಪಂಚವೇ ಅನಿರ್ವಚನೀಯವಾದ ವಂತಾಗಿದೆ. ಯುದ್ಧ ಮುಗಿದು ಸೇರುವ ಶಾಂತಿ ಪರಿಷತ್ತಿನಲ್ಲಿ '30ಕ್ಕೆ ಮಿಕ್ಕಿದ ಅವಿವಾಹಿತರನ್ನೆಲ್ಲಾ ಬಂಧಿಸಿಡಬೇಕು' ಎಂದು ಮೊದಲ ನಿರ್ಧಾರವಾಗದೆ?''

ತದ್ವಿರುದ್ಧ ನಿರ್ಣಯವೇ ಆಗಬಹುದೆಂದು ನಮ್ಮ ಊಹೆ. ಯುದ್ಧ ಪರಿಣಾಮವಾವುದೇ ಆದರೂ ವರ್ಜುನಿಯ ಶಕ್ತಿ ಸ್ಮರಣೆಯು ರಾಷ್ಟ್ರ ಪ್ರಮುಖರಲ್ಲೆಲ್ಲಾ ಶತಮಾನಗಳ ವರೆಗುಳಿಯುವದು ಖಂಡಿತ. ಆದ್ದರಿಂದ ಮುಂದೆ ಎಲ್ಲಾ ರಾಷ್ಟ್ರಗಳೂ ಸಶಕ್ತವಾಗಿರಬೇಕೆಂಬ ಧ್ಯೇಯಾನುಸಾರ ಪ್ರತಿಯೊಂದು ರಾಷ್ಟ್ರದ ಪ್ರಧಾನಿಯೂ ಅವಿವಾಹನಾಗಿಯೇ ಇರಬೇಕೆಂಬ ನಿರ್ಧಾರವಾಗಬಹುದು. ಸ್ತ್ರೀಯಧಿಕಾರಿಗಳಿಗೆ ಮಾತ್ರ ವಿನಾಯತಿ ಸಿಗುವದೇನೋ!

★ ವಿಜಯ ★

ಲೇಖಕರು: ಶ್ರೀಯುತ ಕೆ. ವಿ ಶೆಣೈ, ಬಿ ಎ , ಎಲ್. ಟಿ, ಉಡುಪಿ.

ಅಂದು ಭಾನುವಾರವಾಗಿತ್ತು. ಇಸ್ಪೀಟ್ ಆಟದ ಭರದಲ್ಲಿ ಯಾರ ಕಣ್ಣೂ ಗಡಿಯಾರದತ್ತ ಹೋಗಿರಲಿಲ್ಲ. ಆದ ಕಾರಣ ಕ್ಲಬ್ಬಿನಿಂದ ಹೊರಟು, ಮನೆ ಸೇರುವಾಗ ಹೊತ್ತು ನೆತ್ತಿಗೇರಿತ್ತು. ಬಂದವನೇ ರೂಮಿನೊಳಗೆ ಹೋಗಿ, ಕೋಟು ತೆಗೆದಿಟ್ಟೆ. ಆದರೂ ಮನೆಯಲ್ಲಿ ಯಾರೂ ಇದ್ದಂತೆ ತೋರಲಿಲ್ಲ. ಅಷ್ಟು ಮೌನವಾಗಿತ್ತು ಮನೆಯ ವಾತಾವರಣ.

'ಜಯೆಯು ಇನ್ನೂ ಅಡುಗೆಕೋಣೆಯಲ್ಲೇ ಇದ್ದಾಳೆ. ಏನಿದು? ನಾನು ಈ ಹೊತ್ತು ತಡವಾಗಿ ಬರುವೆನೆಂದು ಈಕೆಗೆ ಕನಸುಬಿದ್ದಿತ್ತೆ? ಇಲ್ಲವಾದರೆ—ಯಾವಾಗಲೂ ನನ್ನ ಆಗಮನವನ್ನು ನಿರೀಕ್ಷಿಸುತ್ತ ನಿಲ್ಲುತ್ತಿದ್ದ ಜಯಾ ಇಂದು ಒಳಗೇ ಏಕೆ ಕುಳಿತಿರಬೇಕು? ಸ್ವಲ್ಪ ಮೋಜು ಮಾಡೋಣ' ಎಂದು ನಾನಂದುಕೊಂಡೆ.

'ಜಯಮ್ಮಾ!' ಎಂದೆ.

'ಯಾರದು'? ಆಕೆ ಕೇಳಿದಳು.

ನನಗೆ ತಮಾಷೆಯು ಉಕ್ಕಿ ಬಂತು. ನಾನು ಬಂದುದು ಆಕೆಗೆ ತಿಳಿದಿಲ್ಲವೆಂಬುದು ಖಂಡಿತವಾಯಿತು.

'ಅಮ್ಮಾ, ರಾಯರಿದ್ದಾರೆಯೇ ಮನೆಯಲ್ಲಿ?'—ಸ್ವಲ್ಪ ಸ್ವರ ಬದಲಾಯಿಸಿ ನಾನು ಮರುತ್ತರ ಕೊಟ್ಟೆ.

'ಪೇಟೆಗೆ ಹೋಗಿದ್ದಾರೆ. ಯಾರದು?....ಏನು ಕೆಲಸ?' ಎನ್ನುತ್ತಾ ಆಕೆ ಹೊರಗೆಬಂದಳು. ನನ್ನನ್ನು ಕಂಡಾಕ್ಷಣ ಮುಖ ತಿರುಗಿಸಿ 'ಇಸ್ಸಿ ಯಪ್ಪ ಹುಡುಗಾಟಕೆಯೆ?' ಎಂದು ಹುಸಿ ಮುನಿಸಿನಿಂದ ಆಕೆ ಹಿಂದೆ ಸರಿದಳು.

'ಜಯಾ! ಇಲ್ಲಗೆ ಬರಲಾರೆಯಾ?'

'ಯಾಕೊ- ಒಳಗೆ ತುಂಬಾ ಕೆಲಸ ಉಳಿದಿದೆ.'

'ಕೆಲಸವೇನೇ ಇರಲಿ' ನೋದಲೊಮ್ಮೆ ಇತ್ತಬಾ.'

'ಹೊತ್ತು ಹನ್ನೆರಡಾಯಿತು.ಬೇಕೆಯಿನ್ನೂ ಸರಿಯಾಗಿ ಬೀಯಲಿಲ್ಲ'

'ಅದೇನು! ನಾನು ಈ ಹೊತ್ತು ತಡವಾಗಿ ಬರುವೆನೆಂದು ಬೇಕೆಗೆ ಯಾರು ಹೇಳಿದರು?'

'ಯಾರೇಕೆ ಹೇಳುತ್ತಾರೆ. ನಮ್ಮ ದೇವರ ಗುಟ್ಟು ನಮಗೆ ಗೊತ್ತಿಲ್ಲದಿದ್ದರಲ್ಲವೆ?'

'ಹೋಗಲಿ, ಇಲ್ಲಿಗೆ ಬಾ. ಒಂದು ಏಕಾಂತವಿ

'ಏನು ಏಕಾಂತ?'

'ಬಂದರೆ ಮಾತ್ರ ಹೇಳುತ್ತೇನೆ.'

'ಕೆಲಸದ ನಡುವೆ ನಿಮ್ಮದೊಂದು ಅವಾಂತರ'

'ಅವಾಂತರ ಗಿವಾಂತರ ನನಗೂ-ನನಗೇ ಲಾಭ-ಬೇಕಾದರೆ ಬ

'ಅಲ್ಲೇ ಹೇಳಿಬಿಡಿ.....ಅಂತೂ ಊಟ ಬೇಗವಾಗ್ಲುವಂತೆ ಬೇಗ ಹೇಳಿ' ಎಂದು ಹೇಳುತ್ತ ಮುಂದೆಬಂದು ಅರೆಜಾರಿದ ಸೀರೆಯೊಳಗೆ ತನ್ನ ದೇಹ ಸೌಂದರ್ಯವನ್ನು ಬೀರ ತೊಡಗಿದಳು.

'ಹತ್ತಿರ ಬರುವುದಿಲ್ಲವೆ?'

'ಊಹುಂ!'

'ಹಾಗಾದರೆ ನಡಿ.'

ಆಕೆ ಹೊರಡಲನುವಾದಳು.

'ಜಯಾ- ಬಾ ಎಂದರೆ'

ಊಹುಂ'

'ಇಗೋ ಬೇಕೋ ಬೇಡ!'

ಜಿಂಕೆಯ ಮರಿಯಂತೆ ನೆಗೆದು ಬಂತು ಆಕೆಯ ಸವಾರಿ.

'ಏನು ಏನು ಏನು ತಂದಿದ್ದೀರಿ!!"

'ನೋಡು ನೀನು ನೊನ್ನೆ ಹೇಳಿದ್ದು.....ಝೂಲಾ'

'ಸೀರೆಯೇ?'

'ಹುಂ'

'ಕೊಡಿ ಮತ್ತೆ'

'ಬಾ ಒಳಗೆ!' ಜಯಾ ಒಳಗೆ ಬಂದು ಅಲ್ಲೇ ಕುರ್ಚಿಯ ಮೇಲೆ ಕುಳಿತುಕೊಂಡಳು.

'ಹಾಂ ಅಲ್ಲೇ ಮೇಜಿನ ಮೇಲಿದೆ ನೋಡು'.

'ಗಾಬರಿಯಿಲ್ಲ'.

ಆಕೆ ಸೀರೆಯನ್ನು ಹುಡುಕಲುದ್ಯುಕ್ತಳಾದಳು. ನಾನು ಮೆಲ್ಲನೆ ಹಿಂದಿನಿಂದ ಬಂದು ಆಕೆಯ ಕೈ ಹಿಡಿದೆ.

'ಥೂ ಬಿಡಿ ಎಂದರೆ. ಸೀರೆಯೆಲ್ಲಿ?'

'ಸೀರೆಯೂ ಇಲ್ಲ; ಸೀರೆಯೂ ಇಲ್ಲ. ಬರಲೊಪ್ಪದವಳನ್ನು ತರಲಿಕ್ಕೆ ಇಷ್ಟೆಲ್ಲಾ ಉಪಾಯ—ತಿಳಿಯಿತೆ?

ಜಯೆಯ ಮುಖ ಸಾಸಿವೆಯಷ್ಟು ಸಣ್ಣದಾಯಿತು. ಆಕೆ ಸಿಟ್ಟಾದವಳಂತೆ ಒಳಗೆ ಹೋದಳು.

ಅರೆತಾಸು ಕಳೆದ ಬಳಿಕ ನಾನೂ ಒಳಗೆ ಹೋದೆ. ನಾನೇ ಎಲ್ಲ ಹಾಕಿಕೊಂಡೆ. ಜಯಾ ನನ್ನ ಮೇಲೆ ಸಿಟ್ಟಾಗಿದ್ದಳು. ಅನ್ನ ಸರಿಯಾಗಿ ಬೆಂದಿರಲಿಲ್ಲ. ಸಾರಿಗೆ ಉಪ್ಪಿತ್ತೋ ಇಲ್ಲವೋ? ಬಡಿಸುವಾಗ ಚರಿಗೆ-ಸೌಟುಗಳ ಗಡಬಡ ಸದ್ದು ಆಕೆಯ ಸಿಟ್ಟನ್ನು ಹೊರ ಹಾಕುತ್ತಿತ್ತು ಅಂತೂ ಚಾಚೂ ಮಾತಿಲ್ಲದೆ, ನಾನು ಊಟ ಮುಗಿಸಿ ಹೊರಬರಬೇಕಾಯಿತು.

ಂಂ ಂಂ ಂಂ

ಅಂದು ಪ್ರಭಾತ್ ಫಿಲ್ಮ್ ಕಂಪೆನಿಯವರ 'ಆದ್ಮಿ' ನಮ್ಮೂರಿಗೆ ಬಂದಿತ್ತು. 'ಎರಡೇ ದಿನಗಳ ಮಟ್ಟಿಗೆ' ಎಂದು ಮ್ಯಾಲಕರು ನೊದಲೆ ಸೂಚನೆ ಕೊಟ್ಟಿದ್ದರು. 'ಈ ಹೊತ್ತು ನೋಡಿದ್ದೇ ಬಂತು.' ಎಂದು ಎರಡು ಟಿಕೇಟ್ ರಿಝರ್ವ ಮಾಡಿಸಿ ಮನೆಗೆ ಬಂದಿದ್ದೆ ನಾನು. ಊಟ ಮುಗಿದ ಬಳಿಕ:—

'ಜಯಾ ಸಿನಿಮಾಕ್ಕೆ ಹೋಗೋಣವೇ! ಪ್ರಭಾತ್‌ನವರ ಆದ್ಮಿ ಯಂತ್ಕೆ—ಶಾಂತಾ ಹುಬ್ಳೀಕರ್. ನಿನ್ನ ಹಾಗೆಯೇ ಇದ್ದಾಳೆ' ಎಂದೆ.

'ಇಲ್ಲ. ನಾನು ಬರುವುದಿಲ್ಲ.'

'ಬೇಡವಾದರೆ ಸುಮ್ಮನಿರು. ನಿನ್ನ ಅಹಂಕಾರಕ್ಕೆ ನಾನು ಹೆದರುವೆನೇ? ನಾನೇ ಎರಡು ಬಾರಿ ನೋಡುತ್ತೇನೆ.'

'ಅಗತ್ಯವಾಗಿಯೂ ನೋಡಬೇಕು. ನನ್ನೊಡನೆ ಆ ಬಡಾಯಿ ಮೇಕೆ!'

ನಾನು ಆ ರಾತ್ರಿ ಸಿನಿಮಾದ ಕಡೆಗೆ ಹೊರಟಿ.

೦೦ ೦೦ ೦೦

ಸಿನಿಮಾ ರಾತ್ರಿ ಹನ್ನೆರಡುವರೆಯ ತನಕ ಮುಂಬರಿಯಿತು. ಶುಕ್ಲ ಪಕ್ಷವಾಗಿದ್ದರೂ ಹೊರಗೆ ತಿಂಗಳುಬೆಳಕಿರಲಿಲ್ಲ. ಬಾನೆಲ್ಲ ನೋಡಗ ಳಿಂದ ಮುಸುಕಿತ್ತು. ಮಳೆಯೂ ಹನಿಹನಿಯಾಗಿ ಬೀಳಲಾರಂಭಿಸಿತ್ತು. ನಾನು ಸಿನಿಮಾ ನೋಡುವುದರಲ್ಲೇ ಲೀನನಾಗಿದ್ದೆ. ಶಾಂತಾ, ಸಾಹು ಕಾರ ನೋದಕ—ಇವರ ಚಿತ್ತಾಕರ್ಷಕ ಅಭಿನಯವು ಬಗೆಮುಟ್ಟುವಂತಿತ್ತು. ನನಗೂ 'ಪ್ರೇಮಿಸಾ ಪ್ರೇಮ ನಗರಮೇ ಜಾಯೇ' ಎಂದು ಹಾಡುವ ಉತ್ಸಾಹವಿತ್ತು. ಜಯಾ ಬಂದಿದ್ದರೆ ಈ ಹಾಡನ್ನು ಎಷ್ಟು ಸುಮಧುರ ವಾಗಿ ಹಾಡುತ್ತಿದ್ದಳು ಎಂದು ಯೋಚಿಸತೊಡಗಿದೆ. ಸಿನಿಮಾ ಮುಗಿ ಯುತ್ತಿದ್ದಂತೆ 'ಟಾಂಗಾ' ಮಾಡಿಸಿ ಮನೆಗೆ ಹೋದೆ. ಪುನೆ ಮುಟ್ಟಿದಾಗ ಗಂಟೆ ಎಚ್ಚರಿಗಲಿಲ್ಲವೆಂದು ತೋರುತ್ತೆ. ರಾಮುವು ಬಾಗಿಲು ತೆರೆದುದು ಬಹಳ ಹೊತ್ತು. ಹೆಚ್ಚು ಹೊತ್ತು ನಾನು ಹೊರಗೆ ನಿಲ್ಲಲಿಲ್ಲ. ಮನೆಯೊಳಗೆ ಬಂದು ಬಾಲು ತೊಳೆದು, ಮಲಗುವ ಕೋಣೆಗೆ ಹೋಗಿ, ಹಾಸಿಗೆ ಬಿಡಿಸಿ ಮಲಗಿ ಕೊಂಡೆ.

ಕಣ್ಣೆವೆ ಮುಚ್ಚುತ್ತಿವೆಯೆನ್ನುವಷ್ಟರಲ್ಲಿ ರಾಮುವು ಬಂದು ನನ್ನನ್ನು ಬೈಸಿದ. 'ಏನು! ವಿಶೇಷವೇನು!' ಎಂದು ನಾನು ಪ್ರಶ್ನಿಸಿದೆ.

'ಅಕ್ಕನಿಗೆ ಜ್ವರ, ಹೊಟ್ಟೆನೋವು ಒಲವಾಗಿದೆ'ಯೆಂದ.

ನಾನೂ ದಿಗಿಲುಗೊಂಡೆ. 'ಹಿಂದಿನ ದಿನ ವೃಥಾ ಆಕೆಯ ಮನ ನೋಯಿಸಿದುದು ತಪ್ಪಾಯಿತು—ಅದರ ಪರಿಣಾಮವಾಗಿರಬೇಕು.' ಎನಿಸಿತು.

'ಜಯೆಯಿದ್ದಲ್ಲಿಗೆ ಹೋಗಿ ನಾಡಿ ಹಿಡಿದು ಪರೀಕ್ಷಿಸಿದೆ. ಮೈ ಸ್ವಲ್ಪ ಬೆಪ್ಪಾಗಿತ್ತು.

'ಜಯಾ....ಏನಾಗುತ್ತಿದೆ?'

'ಜ್ವರ...ಹೊಟ್ಟೆನೋವು....ಅಬ್ಬಬ್ಬಾ!' ಎಂದು ಜಡಪಡಿಸಿದಳು ಕೆ.

'ಡಾಕ್ಟರರನ್ನು ಕರತರಿಸಲೆ'!

'ಹುಂ'

ರಾಮುವನ್ನು ನೆಟ್ಟಗೆ ಡಾಕ್ಟರರಲ್ಲಿಗೆ ಕಳುಹಿಸಿದೆ. ಕಾಲುತಾಸಿ ನಿಯೇ ಡಾಕ್ಟರರೂ ಬಂದರು. ರೋಗಿಯನ್ನು ಪರೀಕ್ಷಿಸಿದರು. ನಂತರ ಪುನಃ ಪರೀಕ್ಷಿಸಿದರು.. ಹೊರಗೆ ಬಂದು 'ಚಿಂತೆಯಿಲ್ಲ. ಸ್ವಲ್ಪ ವಿಶ್ರಾಂತಿ ಪೂರ್ಣವಾಗಿದ್ದಿರಬೇಕು. ನಾಳೆ ಬೆಳಗ್ಗೆ ನೋಡೋಣ. ನೋವಿನ ತೀವ್ರತೆ ಕಡಿಮೆಯಾದರೆ ಸಾಕು' ಎಂದು ಔಷಧಿ ಕೊಟ್ಟು ಹೊರಟು ಹೋದರು.

ಆದರೆ ಡಾಕ್ಟರರು ಹೊರಟು ಹೋದಾಕ್ಷಣ ಕೋಣೆಗೆ ಬಂದು ನೋಡುವುದೇನು? ಹೇಳಿದರೆ ನೀವು ನಂಬಲಿಕ್ಕೆಲ್ಲ-ಜಯಾ ಹಾಸಿಗೆ ಮಡಿಸಿ ಕೇಕೆಹಾಕುತ್ತ ನಗುತ್ತಿದ್ದಳು.

'ನೀರೆಯನ್ನು ನೀವು ತರಲಿಲ್ಲ. ಅದರ ಹಣ ಡಾಕ್ಟರರಿಗೆ ಸಂದಂತಾಯಿತು. ನನಗೂ ಕಪಟ ತಿಳಿಯದೆಂದು ಎಣಿಸಿದಿರೇ?' ಎಂದು ಆಕೆ ಮೂದಲಿಸಿದಳು.

'ಸರಿ ಜಯಾ, ನೀನೇ ಹುಶಾರ್. ಮಯ್ಯಗೆ ಮಯ್ಯಿ ತೀರಿಸಿದೆ. ನೀನೆಲ್ಲೋ, ತಪ್ಪಿ ಹೆಣ್ಣಾದೆ. ಗಂಡಾಗಿದ್ದರೆ ನಿನ್ನ ಕಾರುಭಾರು ಎಷ್ಟಿತ್ತೋ? ಎಂದು ಬರಸೆಳೆದು ಅವಳ ಗಲ್ಲಗಳ ಮೇಲೆ.....

ಹಿಂದಿರುಗಿ ನೋಡುತ್ತೇನೆ—ರಾಮುವು ಕಿಟಕಿಯಲ್ಲಿ ನಗುತ್ತಿದ್ದ.

ಸುಲಭದಲ್ಲಿ ಇಂಗ್ಲಿಷು

ಯುವಕರಿಗೆ ಮತ್ತು ವಯಸ್ಕರಿಗೆ ಸುಲಭವಾಗಿ ಇಂಗ್ಲಿಷನ್ನು ಅನ್ಯಸಹಾಯವಿಲ್ಲದೆ ಕಲಿಸಿ ಕೊಡುವ ಪುಸ್ತಕ

ರಾಜವಾಣಿ

ದ್ವಿತೀಯ ರಂಗಾರಂಭ ದಿನದ ರಾತ್ರಿಯಲ್ಲಿ ಬ್ರಿಟಿಷ್ ಚಕ್ರವರ್ತಿಗಳು ತನ್ನ ಜನತೆಗಿತ್ತ ಭಾಷಣ: ''ಇನ್ನೊಂದು ಮಹತ್ತಾದ ಪರೀಕ್ಷೆಗಿದಿ ರಾಗಬೇಕಾಗಿ ಬಂದಿದೆ ಈ ಬಾರಿಯ ಧುರವೀಳ್ಯವು ನಮ್ಮನ್ನು ಉಳಿಸಿಕೊ ಳ್ಳುವದಕ್ಕಾಗಿ ಅಲ್ಲ—ಒಂದು ಉಚ್ಚ ತತ್ವಕ್ಕಾಗಿ ವಿಜಯ ಪಡೆಯುವದ ಕ್ಕಾಗಿ. ಧೈರ್ಯ ಮತ್ತು ತಾಳ್ಮೆಯನ್ನು ಮಿಕ್ಕಿದ ಆವಶ್ಯಕತೆಯೊಂದ ಮತ್ತೊಮ್ಮೆ ಒದಗಿದೆ. ನಮ್ಮಲ್ಲೀಗ ಸ್ಫೂರ್ತಿಯ ಪುನರುತ್ಥಾನ ಮತ್ತು ಅಭೀಜ್ಯ ನಿರ್ಧಾರದ ಅಗತ್ಯವಿದೆ. ಹಿಂದಿನ ಮತ್ತು ಇಂದಿನ ನಮ್ಮ ಕೊರ ತೆಗಳನ್ನು ನಾವು ಆಲಕ್ಷಿಸಿಲ್ಲ. ದೇವರು ನಮ್ಮ ಸಂಕಲ್ಪ ಸಾಧಿಸಿ ಕೊಡ ಲೆಂದು ನಾವು ಸುಮ್ಮಗಿಲ್ಲ; ಬದಲಾಗಿ ದೇವರ ಸಂಕಲ್ಪವನ್ನೇ ನಾವು ಈಡೇರಿಸುವವರಿದ್ದೇವೆ. ನಮ್ಮ ದೇಶ ಮತ್ತು ಸಾಮ್ರಾಜ್ಯವನ್ನೊಂದು ಉಪಕರಣವಾಗಿ ಮಾಡಿ, ತನ್ನ ಉಜ್ಜ್ವ ಧ್ಯೇಯವನ್ನು ದೇವರು ಸಾಧಿಸಲಿ ದ್ದಾನೆ ಎಂದು ನಂಬುವ ಧೈರ್ಯವೀಗ ನಮ್ಮಲ್ಲುಂಟಾಗಿದೆ''

ಪವಿತ್ರ ಪ್ರಾಯಶ್ಚಿತ್ತ

(ಒಂದು ಸ್ಥಿತಿವಿಮರ್ಶೆ).



ಪೃಥ್ವಿರಾಜ್ ಕಪೂರ್.

ಕೆಲವು ಚಲಚ್ಚಿತ್ರ ನಿರ್ಮಾಪಕರ ಅನುಗ್ರಹದಿಂದ, ಈ ಲೋಕದ ಹವೆಯನ್ನು ಸೇವಿಸುತ್ತಿರುವಾಗಲೇ ನರಕದ ಭೀಕರ ದೃಶ್ಯಗಳನ್ನು ಕಣ್ಣಾರೆ ಕಾಣುವಯೋಗ ನನಗೆ ದೊರೆತಿದೆ. ಕಾಗೆಗೂಗೆಗಳಂದ ಚುಚ್ಚಿಸಿ ಕೊಲ್ಲಿಸುವದು; ಕಾದ ಸರಳನ್ನು ನಾಲಿಗೆಗಿಡುವದು; ಅಗ್ನಿಕಂಭವನ್ನಪ್ಪಿಹಿಡಿಸುವದು; ಜಿಗಿ ಜಿಗಿ ಹುಳಮಿಂಚುವ ಹಳ್ಳಕ್ಕೆ ದೂಡಿ ಸಾಯಬಿಡುವುದು-ಇತ್ಯಾದಿ ಶಿಕ್ಷೆಗಳು ಅಲ್ಲಿವೆಯಂತೆ. ಆನಾಗರಿಕ ಯುಗದ ಅಧಿಕಾರಿಗಳು ಈ ಲೋಕದಲ್ಲೂ ಇದೇ ಮಾದರಿಯ ಕೆಲವು ಶಿಕ್ಷೆಗಳನ್ನು ಜ್ಯಾರಿಗೆ ತಂದಿದ್ದರೆಂದು ಓದಿ ಕೇಳಿ ತಿಳಿಯುತ್ತೇನೆ. 20ನೇ ಶತಮಾನದಲ್ಲಿ ಕೂಡಾ ಪಂಜಾಬ್ ಅತ್ಯಾಚಾರದ ಓಡ್ವಾಯರ್ ಯಮನಂಥವರಿದ್ದರು-ಇದ್ದಾರೆ. ಹುಳಗಳಿಂದ ಕೊಲ್ಲಿಸುವ ಶಿಕ್ಷೆ ಈಗಲೂ ಇದೆ-ಆದರದು ಆಧುನಿಕ ಮರ್ಜಿಯಲ್ಲಿದೆ-ಎಂಬುದಕ್ಕೆ ಮಹಾತ್ಮಾಜೀಯೊಂದು ನಿದರ್ಶನ; ಹೊಟ್ಟೆಯ ಹುಳವನ್ನು ಸಾಯಿಸಿ ಕೊಲ್ಲಿಸುವ ಶಿಕ್ಷೆಯ ಸಜೀವತೆಗೆಗಂತೂ ಬಂಗಾಳಿಗಳಂತಹ ಮಿಲಿಯಾವಧಿ ನಿದರ್ಶನಗಳು ಕಣ್ಣ ಮುಂದಿವೆ. ತ್ರಿಕಾಲಗಳಲ್ಲೂ ಲೋಕದ ನಂ. 1ನೇ ಆಪರಾಧಿಸ್ಥಾನ ಮೀಸಲಿರುವ ಹಿಟ್ಲರನು ಒಂದು ದಿನ ಈ ಮಾದರಿಯ ಶಿಕ್ಷೆಗೊಳಗಾಗಬಹುದೆ? ಆ ಸಂಭವ. ಯಾಕಂದರೆ ಅಂತಹ ಶಿಕ್ಷೆವಿಧಿಸತಕ್ಕವರೆಲ್ಲಾ ತಾವು ನವನಾಗರಿಕರನ್ನುತಿದ್ದಾರೆ. ಹೆಚ್ಚೆಂದರೆ ಹೆರ್ ಹೆಸ್ಸನನ್ನಿಂಟಂತೆ,ಸಕಲ ವೈಭವದೊಡನೆ ಹಿಟ್ಲರನನ್ನೊಂದು ಕಾರಾಗೃಹ ಹೊಗಿಸಬಹುದು; ಇಲ್ಲವೇ ಒಂದೇ ಒಂದು ಕ್ಷಣದ ನರಳಾಟಕ್ಕೂ ಅವಕಾಶ ಕೊಡದೆ ಒಂದು ಗುಂಡಿನ ಹೊಡೆತದಿಂದ ಅವನ ಅವತಾರ ಮುಗಿಸಿ ಬಿಡಬಹುದು! ಅಷ್ಟೆ. ಅವನ ಮಹಾಪರಾಧಕ್ಕೆ ಇಷ್ಟರಿಂದಲೇ ಪ್ರಾಯಶ್ಚಿತ್ತವೆ? ಹಿಟ್ಲರನೂ ಒಬ್ಬ ಮನುಷ್ಯ; ಜರ್ಮನಿಯ ಒಂದು ಪಿಡಿಮದ್ದು ಕಾರ್ಖಾನೆಗೆ ಭೇಟಿ ಕೊಡುವಾಗ ಪ್ರಮಾದ ವಶಾತ್ ಸ್ಫೋಟವುಂಟಾದರೆ ಅಲ್ಲಿಯೇ ಆಹುತಿಯಾಗತಕ್ಕ ಒಂದು ಜೀವ. ಅವನ ಆತ್ಯಾಚಾರಗಳಿಗೆ ಮಾಡುವ ಪ್ರಾಯಶ್ಚಿತ್ತವೂ ಅಂತಹ ಪ್ರಮಾದದಷ್ಟೇ ಇದ್ದರೆ ಸಾಕೇನು? ಆ ಲೋಕಕಂಟಕನು ನಿರಪರಾಧಿ ಬಂಗಾಳಿಯೊಬ್ಬನನುಭವಿಸಿದ ಶಿಕ್ಷೆಯನುಭವಿಸುವದು ಬೇಡವೆ? ಅವನನ್ನು ಉಪವಾಸ ಹಾಕಿ ಕೊಲ್ಲಿಸುವಂತಿಲ್ಲ. ಒಂದೊಂದೇ ತುಣುಕು ಮಾಂಸವನ್ನು ಕತ್ತರಿಸಿ, ಒಂದೊಂದೇ ಹೆನಿರಕ್ತ ಬಸಿದು-ಅವನು ಹತ್ತು ವರುಷ ಯುದ್ಧ ನಡಿಸಿದ್ದರೆ ಮುಂದಿನ ಹತ್ತು ವರುಷ ಪರಿಯಂತರವೂ ನಂಬಿನರಳಿ ಸಾಯುವಂತಹ-ಪ್ರಾಯಶ್ಚಿತ್ತ ಮಾಡುವಂತಿಲ್ಲ. ಸಾಮಾನ್ಯ ಮರಣ ಶಿಕ್ಷೆ ಮಾತ್ರ. ಮರಣ ಬಾರದವರಾರು? ಅಷ್ಟಕ್ಕಾಗಿ ಹೆದರಿ ತನ್ನ ದುಷ್ಕೃತ್ಯಗಳನ್ನು ನಿಲ್ಲಿಸಬೇಕೆಂಬ ಆವಶ್ಯಕತೆ ಅವನಿಗೇನು? ಆದ್ದರಿಂದ ಆ ಶಿಕ್ಷೆ ಸಾಲದೆಂದೇ ಲೋಕದ ಅಭಿಪ್ರಾಯವಿರಬಹುದು. ಯುದ್ಧ ಮುಗಿಯಿತು-ಹಿಟ್ಲರ್ ಸೆರೆಸಿಕ್ಕಿದ-ಇಡೀ ಲೋಕಕ್ಕೆ ಅಪರಾಧ ಮಾಡಿದ ಅವನ ಅದೃಷ್ಟವನ್ನು ರೂಪಿಸುವ ಹೊಣೆಯು ಸಹಜವಾಗಿ ಲೋಕದ ಪಾಲಿಗೆ ಬರುತ್ತು--ಆ ತೀರ್ಮಾನ ಕೊಡಲು ಪ್ರತಿಯೊಂದು ರಾಷ್ಟ್ರದಿಂದೊಬ್ಬನಂತೆ ನ್ಯಾಯಾಧೀಶರು ತಂತಮ್ಮ ರಾಷ್ಟ್ರದ ಪ್ರಾಯಸ್ಥರ ವೋಟಿನಿಂದಲೇ ಆರಿಸಲ್ಪಟ್ಟು ತೀರ್ಮಾನಕ್ಕೆ ಕೂಳಿತರು, ಎಂದು ಭಾವಿಸಿಕೊಳ್ಳಿ. ಅಂಥ ಹ ನ್ಯಾಯಸ್ಥಾನದಲ್ಲಿ ಯಾವ ತೀರ್ಮಾನವಾದೀತೆಂದು ನಿಮ್ಮ ಭಾವನೆ? ನೆನಪಿರಲಿ-ನ್ಯಾಯಾಧೀಶಸ್ಥಾನಕ್ಕೆ ಚುನಾಯಿಸಲ್ಪಟ್ಟವರೆಲ್ಲಾ ತಮ್ಮ ಚುನಾವಣಾ ಘೋಷಣೆಗಳಲ್ಲಿ, ಹಿಟ್ಲರನಿಗೆ ತಾವು ವಿಧಿಸಲಿರುವ ನರಕ ಯಾತನೆಗಳನ್ನು ಭೀಭತ್ಸವಾಗಿ ಚಿತ್ರಿಸುವ ಮೂಲಕವೇ ಮತದಾರರನ್ನೊಲಿಸಿಗೆದ್ದು ಬರಬೇಕು. ಆದ್ದರಿಂದ ಅನ್ಯಾಯಾಧೀಶ ಮಂಡಲಿಯು ರಿಯಾಯತಿಯ ಜಡ್ಜ್‌ಮೆಂಟ್ ಹೀಗಿರಬಹುದು-

'ಈ ಪ್ರಥಮಾಪರಾಧಿಯು ದುಷ್ಕೃತ್ಯಗಳು, ಕಲಮು ಸೆಕ್ಷನುಗಳನ್ವಯದ ಸರ್ವ ಶಿಕ್ಷೆಗಳಿಗೂ ಮಿಕ್ಕಿದವುಗಳು. ಆದ್ದರಿಂದ ಓರ್ವ ಮನುಷ್ಯನಂತಲ್ಲ-ಒಂದು ಕಾಡನ್ನು ಕತ್ತರಿಸುವಂತೆ ಈ ಆರೋಪಿಯನ್ನು ಸಾವಧಾನವಾಗಿ ತುಂಡರಿಸುತ್ತಾ ಹೋಗುವದೇ ಸರಿಯಾದ ಶಿಕ್ಷೆ. ಆದರೆ ಆ ಶಿಕ್ಷೆಯನ್ನು ಜ್ಯಾರಿಗೆ ತರುವದು ಅಸಾಧ್ಯಹನ್ನಿಪುತ್ತಿದೆ. ಯಾಕೆಂದರೆ ಹಿಟ್ಲರನ ಐದಾರಡಿಯ ದೇಹವನ್ನು ಕತ್ತರಿಸುವ ಕಾರ್ಯದಲ್ಲಿ ಲೋಕದ ಸಮಸ್ತ ರಾಷ್ಟ್ರಗಳೂ ಅಧಿಕಾರ ಪೂರ್ವಕಪಾಲು ಕೇಳ ಬಹುದು; ಯೆಹೂದಿಗಳಂತಹ ಜನಾಂಗಗಳು ವಿಶೇಷ ಪಾಲು ಕೇಳುವ ಸಂಭವವೂ ಇದೆ. ಹಾಗೆ ಸರಿಪಾಲು ಮಾಡುವಾಗ ಹಿಟ್ಲರನ ದೇಹದಲ್ಲಿ ಒಬ್ಬೊಬ್ಬ ಪಾಲುಗಾರನ ಪಾಲಿಗೆ ಕತ್ತರಿ ಹಾಕುವಷ್ಟು ಸ್ಥಳವೂ ದೊರೆಯುವದು ಕಷ್ಟವನ್ನಿಸುತ್ತದೆ. ಹಿಗಾಗಿ ಅಪರಾಧಿ ಹಿಟ್ಲರನೂ ಅಜೇಯನಾಗಿ ಕಾಣುತ್ತಾನೆ. ಆದ್ದರಿಂದ ಅವನ ಶಿಕ್ಷೆಯು ಎಲ್ಲಾ ವಿಧದಲ್ಲೂ ನ್ಯಾಯವನ್ನಿಸುವಂತೆ ಹಿಟ್ಲರನ ತಲೆಬೋಳಿಸಿ, ಕೈಯಲ್ಲೊಂದು 'ಬಿಳಿ ಮಾವುಟದ ಹೊರತು ಬತ್ತಲೆಗೊಳಿಸಿ, ಕತ್ತೆಯನೇಲೆ ಹತ್ತಿಸಿ, ಪ್ರತಿಯೊಂದು ರಾಷ್ಟ್ರದಲ್ಲೂ ಸುತ್ತಾಡಿಸಬೇಕು. ಕೊನೆಗೆ ಬ್ರೆನ್ನರ್ ಕಣಿವೆಗೆ ದೂಡಿ ಕೊಲ್ಲಬೇಕು'. ಈ ತೀರ್ಪಾನಕೇಳಿ ಲೋಕ ತೃಪ್ತಿಗೊಳ್ಳಬಹುದು! ಹಾಗೆ ಮಾಡದೆ ಮನೆಯೊಂದಕ್ಕೆ ಬೆಂಕಿಕೊಟ್ಟವನಿಗೂ ಫಾಶಿ-ಇಡೀ ಲೋಕಕ್ಕೆ ಬೆಂಕಿ ಹಚ್ಚಿದವನಿಗೂ ಫಾಶಿಯೆಂದರೆ ಆ ನ್ಯಾಯವು ಲೋಕಕ್ಕೊಪ್ಪಿಗೆಯಾದೀತೆ? ಬರಿಯ ಮರಣವೊಂದು ಶಿಕ್ಷೆಯಲ್ಲವೇ ಅಲ್ಲ-ಯಾವ ಅಪರಾಧವೂ ಇಲ್ಲದೆ ಎಡವಿಬಿದ್ದು ಸತ್ತವರಿದ್ದಾರೆ; ಪ್ರಣಯ ಕಲಹದಿಂದ ಮುಹೂರ್ತ ಮಾತ್ರಕ್ಕೆ ಸಿಟ್ಟೇರಿದ ಗಂಡನ ತಾಡನ ಕೆನ್ನೆಗೆ ಬಿದ್ದು ಹೆಂಡತಿ ಹೊರಟು ಹೋದುದಿದೆ; ಲೋಕ ಕಂಟಕನಿಗೂ ಆಷ್ಟೇ ಎಂದರೇನರ್ಥ? ಇವರು ಕೊಲ್ಲದಿದ್ದರೆ ಹಿಟ್ಲರ್ ಸಾಯುವದೇ ಇಲ್ಲವೇನು!

ಂಂ ಂಂ ಂಂ

ಈಗ ನಮ್ಮ ಕಾಲಡಿಯನ್ನೇ ನಾವು ನೋಡೋಣ! 'ಬಂಗಾಳದ ಬರಗಾಲ ಮನುಷ್ಯ ನಿರ್ಮಾಣ' ವೆಂಬುದು ಸರ್ವಶ್ರುತ. ಮಿಲಿಯಾವದಿ ಜನರನ್ನು ಕರಗಿಸಿ ಸೊರಗಿಸಿ ಕೊಂದ ಅಪರಾಧಿಗಳನ್ನು ಗುರುತು ಚೀಟಿ ಹಚ್ಚಿ ನೆನಪಿಟ್ಟುಕೊಳ್ಳೋಣ. ಕಸ್ತೂರಿಬಾ, ಮಹದೇವ ದೇಸಾಯಿಗಳದು ಸ್ವಾಭಾವಿಕ ಮರಣವಲ್ಲ-ಅದೊಂದು ವಿಧದ ಕೊಲೆ. ಈ ಕೊಲೆಗಾರರ ಹೆಸರನ್ನೂ ಆ ಪಟ್ಟಿಗೆ ಸೇರಿಸಿಕೊಳ್ಳೋಣ. ನಮ್ಮಲ್ಲಿ ಈಗ ತಾನೇ ಸನ್ನಿಹಿತವಾಗುತ್ತಿರುವ ಮಳೆಗಾಲದ ಒಂದು ನಿಂಚಾಗಿ ಹಿಂದು ಸ್ಥಾನದಲ್ಲಿ ಝಗ್ಗನೆ ಪೂರ್ಣ ಸ್ವಾತಂತ್ರ್ಯ ಬೆಳಗಿತೆಂದು ಭಾವಿಸಿಕೊಳ್ಳಿ. ಆ ಬೆಳಕಿನಲ್ಲಿ ಮೇಲಿನವರೆಲ್ಲಾ ಅಪರಾಧಿಗಳಾಗಿ ಸ್ಪಷ್ಟಕಾಣಬೇಕಷ್ಟೆ. ಅವರ ಅಪರಾಧಕ್ಕೆ ಯೋಗ್ಯ ಪ್ರಾಯಶ್ಚಿತ್ತವಾಗುವದು ಬೇಡವೆ? ಆದಕ್ಕಾಗಿ ಬಂಗಾಳದ ಬರಗಾಲ ಬಲಿಗಳ ಪರವಾಗಿ 10 ಸ್ಥಾನಗಳು-ಗಾಂಧೀ ಪಂಗಡಿಗರ ಪರವಾಗಿ ಸಂದಾರ ವಲ್ಲಭಾಯಿಯವರಿಗೊಂದುಸ್ಥಾನ-ಮಿಕ್ಕ ಎಲ್ಲಾ ವಿಧದ ಅನ್ಯಾಯಕ್ಕೊಳಗಾದವರ ಪರವಾಗಿ 10 ಪ್ರಾತಿನಿಧ್ಯ-ಜುಮ್ಲಾ 21 ಮಂದಿ ನ್ಯಾಯಾಧೀಶರುಳ್ಳ ಒಂದು ತೀರ್ಮಾನ ಮಂಡಲಿ ನೇಮಕವಾಯಿತು. ಹಿಂದುಸ್ಥಾನಕ್ಕೆ ಅನ್ಯಾಯವಾಡಿದ ಮೇಲಿನ ಅಪರಾಧಿಗಳ ಸಂಬಂಧದ ದಾಖಲೆಗಳನ್ನು ಪರಾಮರ್ಶಿಸಿ ಈ ಸಮಿತಿಯ 'ಜಜ್‌ಮೆಂಟ್' ಆಗಬೇಕು. ಯಾವ ತೀರ್ಮಾನ ಕೊಡಬಹುದು? ಅದು ಯೋಗ್ಯ ಪ್ರತೀಕಾರ ಇಲ್ಲವೇ ನ್ಯಾಯವಾದ ಪ್ರಾಯಶ್ಚಿತ್ತವನ್ನಿಸಬೇಕಾದರೆ:—ಮಿ. ಚರ್ಚಿಲ್ಲರ ಹ್ಯಾಟು ತೆಗೆದು ಅವರ ತಲೆಗೆ ಕಾದ ಸರಳಿನಿಂದ ಮೆದುಳು ಕರ್ರಗಾಗುವ ವರೆಗೂ ಕಾಯಿಸಬೇಕು; ಮಿ. ಅಮೆರಿಯ ಮೇಜಿನ ಮುಂದೆ ಬಂಗಾಳದ ಸ್ಮಶಾನಗಳ ಬೂದಿಯುಳ್ಳ ಒಂದು ತಟ್ಟೆಯನ್ನಲ್ಲದೆ ಸಾಯುವ ವರೆಗೂ ತಿಂಡೀ ತಟ್ಟೆಯನ್ನಿಡಬಾರದು; ಲೋರ್ಡ್ ಲಿನ್‌ಲಿತ್‌ಗೋರವರ ದೇಹದೊಳಗಡೆ ಎದೆನೋವಿನ ಕ್ರಿಮಿಜ್ವರಾಣು ಮತ್ತು ಕುಕ್ಕೇ ಹುಳಗಳನ್ನು 'ಅಂಜೆಕ್ಟ್'ಮಾಡಿ ಕೊನೆಯವರೆಗೂ ಔಷಧಕೊಡಬಾರದು; ಪೋಲಿಸರ ತಲೆಯಲ್ಲಿ ಕೆಂಸು ಟೋಪಿಯ ಬದಲಿಗೆ ಕೆನ್ನೀರೇ ಸದಾ ಜಿನುಗುತ್ತಿರಬೇಕೆಂದು ವಿಧಿಸಬೇಕು—ತಪ್ಪಿಗೆ ತಕ್ಕ ಶಿಕ್ಷೆಯೆಂದರೆ ಇವು-ಕೊಲೆಮಾಡಿದವನಿಗೆ ಮರಣ ದಂಡನೆಯಿದ್ದಂತೆ!

ಂಂ ಂಂ ಂಂ

ನುದನ ಮುಂಜರಿ
ಮಾತ್ರೆಗಳು

ಬಲಹೀನತೆ, ಮಲಬದ್ಧತೆ, ವೀರ್ಯಸ್ಖಲನ, ಧಾತುವಿಕಾರ ಮೊದಲಾದುವುಗಳನ್ನು ಶೀಘ್ರದಲ್ಲೇ ಪರಿಹರಿಸಿ,ರಕ್ತ ಮತ್ತು ವೀರ್ಯಗಳನ್ನು ಧಾರಾಳ ಹೆಚ್ಚಿಸಿ, ದೇಹಕ್ಕೆ ಶಕ್ತಿ, ಸ್ಫೂರ್ತಿ, ಉತ್ಸಾಹಗಳನ್ನು ಕೊಡುತ್ತದೆ.

ಕ್ರಯ:40ಮಾತ್ರೆಗಳ ಡಬ್ಬಿ ರೂ 1

ಮದನಮಂಜರಿ ಫಾರ್ಮಸಿ,
184ನೇ ನಾ ಬಜಾರ್ ರೋಡ್, ಮದ್ರಾಸ್.
ಪುತ್ತೂರು ಏಜಂಟರು:—ಪೈ ಫಾರ್ಮಸಿ.

ಆದರೆ ಮೇಲಿನ ಮಾದರಿಯ ಶಿಕ್ಷೆಗಳಿವೆ ಎಂದು ನಿರೀಕ್ಷಿಸುವಿರಾ? ಆಶಿಸಬೇಡಿ. ಹಿಟ್ಲರನು ಸೆರೆಸಿಕ್ಕುವದಿನ್ನೂ ಬಾಕಿಯಿದೆಯಾದರೂ ಅವನ ಸಮೀಪವರ್ತಿಗಳಲ್ಲೊಬ್ಬ-ಫುರಾರ್ ಪದವಿಯ ವಾರೀಸ್ದಾರ-ಹೆರ್ ಹೆಸ್ ಈಗ ಬ್ರಿಟಿಷ್ ಸೆರೆಮನೆಯಲ್ಲಿದ್ದಾನೆ. ಬರ್ಲಿನಿನ ಅರಮನೆಗೂ ಇಂಗ್ಲಾಂಡಿನ ಸೆರೆಮನೆಗೂ ವ್ಯತ್ಯಾಸವನ್ನೇ ಅರಿಯದಿದ್ದಾನೆ! ಪಂಜಾಬಿನಲ್ಲಿ--ಅಡುಗೇ ಮನೆಯಲ್ಲಿ ಕಾಣಿಸಿಕೊಂಡ ಇರುವೇ ಸಾಲನ್ನು ನಜ್ಜುಗುಜ್ಜು ಮಾಡುವ ದಾಸಿಯಂತೆ -ಹಿಂದೀಯರನ್ನೆಲ್ಲಾ 'ಚಟ್ನಿ' ಮಾಡಿಬಿಟ್ಟ ಜನರಲ್ ಒಡ್ವಾಯರನನ್ನು ಇಂಗ್ಲಾಂಡಿನಲ್ಲೊಬ್ಬ ಹಿಂದೀ ವಿದ್ಯಾರ್ಥಿ ಗುಂಡಿಟ್ಟು ಕೊಂದಾಗ, ಗಾಂಧಿಜೀಯಿಂದಾರಂಭಿಸಿ ಎಲ್ಲಾ ಪ್ರಮುಖರೂ ಆ 'ಬೇಜವಾಬ್ದಾರೀ ಹುಡುಗನ ದುರ್ವರ್ತನೆ'ಯನ್ನು ಖಂಡಿಸುವ ಕೆಲಸ ವಹಿಸಿದ್ದರು. ಅರ್ಥಾತ್ ಮೇಲಿನ ಪ್ರತೀಕಾರದ ದೃಷ್ಟಿಯಿಂದ ಇವರೂ ಅಪರಾಧ ಮಾಡಿದ್ದರು. ನಾಜೀ ಪ್ರಮುಖನನ್ನು ಕತ್ತೇ ಮೆರವಣಿಗೆ ಮಾಡಿಸುವಾಗ ಹೆಸ್ಸನಂತಹ ನಾಜಿಯೊಬ್ಬನಿಗೆ ಆತಿಥ್ಯ ಸಲ್ಲಿಸಿದ ಬ್ರಿಟಿಷ್ ಅಧಿಕಾರಿ ವರ್ಗವನ್ನು ಒಂದೊಂದು ಘಂಟೆಯಾದರೂ ಬಿಸಿಲಲ್ಲಿ ನಿಲ್ಲಿಸಬೇಕು; ಅತ್ಯಾಚಾರಿ ಒಡ್ವಾಯರನ ಕೊಲೆಗಾರನನ್ನು ಹೀನೈಸಿದವರ ನಾಲಿಗೆಗೊಮ್ಮೆ ಗಾಡೀಯೆತ್ತಿನ ಬರೆಯೆಳೆಯಬೇಕು; ಪ್ರತೀಕಾರದ ಸಾಲಲ್ಲಿ ಇಂಥವರ ಈ ಶಿಕ್ಷೆಗಳೂ ಬಾರದಿರಲಾಗುವದಿಲ್ಲ. ಆದರೆ ಹಾಗಾಗಿಲ್ಲ! ಬಿಳಿ ಹುಡುಗಿಯೊಬ್ಬಳನ್ನೈಸ್ಪರ್ಶಮಾಡಿದ ನೀಗ್ರೋವಿನ ಮನೆಗೆ ಮುತ್ತಿಗೆ ಹಾಕುವಂತೆ, ಈ ಹೆಸ್ಸನ ಅತಿಥಿ ಗೃಹದ ಮೇಲೆ ಜನತಂಡವು ಕವಿದು ಬಿದ್ದ ವಾರ್ತೆ ಬಂದಿಲ್ಲ; ಡಾಯರ್ ಒಡ್ವಾಯರರ ಪ್ರಾಣವನ್ನ ಪೇಕ್ಷಿಸುವ ಒಂದೇ ಒಂದು ನಿರ್ಧಾರವನ್ನೂ ಭಾರತ ರಾಷ್ಟ್ರ ಸಭೆ ಮಾಡಿದುದಿಲ್ಲ. ಹಾಗಾದರೆ ಪ್ರತೀಕಾರ ಮಾಡುವದು ಜನತೆಗೂ ಬೇಡವಾಗಿದೆಯೆ? ಮಹಾಮಹಾ ಅಪರಾಧ ಮಾಡಿದವರು ಅಪಜಯಗೊಂಡರೂ ಅಪಾಯಕ್ಕೊಳಗಾಗುವ ಸಂದರ್ಭವೇ ಇಲ್ಲವೆ? ಇಲ್ಲ; ಇರಕೂಡದು! ಅದೀಕ ನಾಗರಿಕತೆ.

೦೦ ೦೦ ೦೦

ಯಾವುದದು? ಅಪರಾಧಕ್ಕೆ ಶಿಕ್ಷೆಯಿಲ್ಲದಿರುವದೂ ಒಂದು ನಾಗರಿಕತೆಯೆ? ಹಾಗಲ್ಲ, ಅಪರಾಧಕ್ಕೆ ಪ್ರತಿಯಾಗಿ ಅಪರಾಧ ಮಾಡದಿರುವದೊಂದು ಉಚ್ಚ ನಾಗರಿಕತೆ ಹಾವಿನ ವಿಷದ ಹಲ್ಲನ್ನು ಕಳಚಿ, ಕಡಿಯುವವನ ಕತ್ತಿ ಕಸಗೊಂಡು, ನಾಗರಿಕತೆ ತೃಪ್ತಿಹೊಂದುತ್ತದೆ; ಒಮ್ಮೊಮ್ಮೆ ಕೇವಲ ತನ್ನ ಘಾಯಕ್ಕೆ ಚಿಕಿತ್ಸೆಮಾಡಿಸುವದರಲ್ಲೇ ತಲ್ಲೀನಗೊಂಡು ಕಚ್ಚಿದುದರ, ಕಡಿದವನ ಗೊಡವೆಯನ್ನೇ ಅದು ಬಿಟ್ಟುಬಿಡುವದೂ ಇದೆ. ದೃಷ್ಟಾಂತಕ್ಕಾಗಿ ಈಗಲೇ ಗಾಂಧಿಜೀಯ ಕೈಗೆ ಭಾರತದ ಅಧಿಕಾರ ಸೂತ್ರ ಬಂದರೆ, ಅವರು ಸರ್ವರಿಗೂ ಅನ್ನವಸ್ತ್ರ ದೊರಕುವ ಏರ್ಪಾಡನ್ನು ಜ್ಯಾರಿಗೆ ತರಲು ಪ್ರಯತ್ನಿಸಿಯಾರು ಹೊರತು ದೇಶದ ಬರಗಾಲಕ್ಕೆ ಕಾರಣರಾದ ಅಧಿಕಾರಿಗಳಿಗೆ ಐದೈದು ರೂ. ಗಳ ಜುಲ್ಮಾನೆಯನ್ನಾದರೂ ವಿಧಿಸುವಂತಿಲ್ಲ, ಯಾಕಿಲ್ಲ. ಅದನ್ನು ತಿಳಿಯಬೇಕಾದರೆ ಮಾನುಷತ್ವವು ತುಂಬಿಬರಬೇಕು. ಹೃದಯ ಕುದಿದು ಏಳುವ ನೂರೆಕಷ್ಮಲಗಳಂತಿರುವ ಕ್ರೋಧ, ಮದ, ಮತ್ಸರಗಳನ್ನು ಕಿತ್ತೊಗೆದು, ತಿಳಿ ಮನಸ್ಸಿನಿಂದಲೇ ತಿಳಿಯಬೇಕು. ಆಗ ತಿಳಿದೀತು. ಆ ಹಿಟ್ಲರ್ ಮುಸಲನ್ನಿ, ಈ ಚರ್ಚಿಲ್ ಅಮೆರಿಗಳೆಲ್ಲಾ ಟೇಂಕು ವಿಮಾನಗಳಂತಹೆ ಉಪಕರಣಗಳು ಮಾತ್ರವೆಂದು! ಚರ್ಚಿಲ್ಲರು ಹುಟ್ಟುವ ಮೊದಲೇ ಬ್ರಿಟಿಷ್ ಸಾಮ್ರಾಜ್ಯ ರೂಪುಗೊಂಡಿದ್ದಿತು. ಅಮೆರಿ ಅಧಿಕಾರಕ್ಕೆ ಬರುವ ಮೊದಲು ಭಾರತ ! ಕಾರ್ಯದರ್ಶಿಸ್ಥಾನಕ್ಕೊಬ್ಬ ದೊರೆಯದ ದೆಸೆಯಿಂದ ಹಿಂದುಸ್ಥಾನ

ತಾ. 11—6—44ರಿಂದ
ಅತ್ರೆ ಪಿಕ್ಚರ್ಸಿನವರ ಆದರ್ಶ ಚಿತ್ರ
ತಸ್ವೀರ್ ಅಥವಾ ಭಾವಚಿತ್ರ
ಇದರಲ್ಲಿ ದುರ್ಗಾ ಬಾಯಿ ಖೋಟೆ. ಮೋಲಾತಿಲ್ ಮತ್ತು ಅಂಜಲೀದೇವಿ ಇವರು ಅಭಿನಯಿಸಿದುವರು
ಆನಂತರ
ನಳಿನೀ ಜಯವಂತ್ ಮತ್ತು ಸುಲೋಚನಾ ಅಭಿನೀತ
ಆಂಖ್ ಮಿಚೌಲಿ ಅಥವಾ ಕಣ್ಣುಮುಚ್ಚಾಲೆ

ವನ್ನೇ ಬಿಟ್ಟುಕೊಡುವ ಯೋಚನೆ ಬ್ರಿಟಿಷರಲ್ಲಿಂದಾದರೂ ಹುಟ್ಟಿದುದಿದೆಯೆ? ಆದು ಹಾಗಿರಲಿ-ಚೇಂಬರ್ಲಿನ್ 'ಮೊಂಡು ಆಯುಧ'ವೆಂದು ತಿಳಿದೊಡನೆ ಆದನ್ನೆತ್ತಿ ಆಜೆಗೊಗೆದು ಹರಿತ ಖಡ್ಗ ಚರ್ಚಿಲ್ಲರನ್ನೆತ್ತಿಕೊಂಡ ಕೈಯಾವುದು? ಎಂಟನೇ ಎಡ್ವರ್ಡರ ಕಿರೀಟ ಕೆಳಗಿಡಿಸಿದ ಹಸ್ತವಾವುದು? ಸಾಮ್ರಾಜ್ಯಶಕ್ತಿ; ಪರಂಪರಾಗತ ಪದ್ಧತಿ. ಆ ಆಸ್ತಿವಾರ ವೊಂದೇ ಉಳಿದಿದೆ; ಅಧಿಕಾರಿ ಯಾರೂ ಉಳಿದಿಲ್ಲ. ಅಂದ ಮೇಲೆ ನಿವಾರಿಸಬೇಕಾದುದು ಆ ಪದ್ಧತಿಯನ್ನು. ಆದನ್ನು ಬಿಟ್ಟು ಅಧಿಕಾರಗಳನ್ನು ಶಿಕ್ಷಿಸಲು ಹೊರಟರೆ ಕಾಡು ಕಡಿಯುವ ಬದಲಿಗೆ ಕಪಿಯನ್ನಷ್ಟೇ ಹಿಡಿದ ಪ್ರಮಾದವಾಗಬಹುದು. ಹಿಟ್ಲರ್ ನಾಜೀ ಪಂಥದ ಜನಕ. ಈ ದಿನದ ಆಕಾಶ ಛಾಳಿಯ ಒಂದು ಬೋಂಬು ಹಿಟ್ಲರನ ತಲೆಗೆ ಬಿದ್ದರೆ ಅವ ಮಾತ್ರ ಸತ್ತ-ನಾಜೀ ಪಂಥ ಸಾಯದು! ನಾಳೆ ಮುಂಜಾನೆ ಗೋರಿಂಗ್ ಹಿಟ್ಲರನಾದಾನು; ನಾಳೆ ಸಂಜೆಯ ಛಾಳಿಗೆ ಅವ ಆಹುತಿಯಾದರೆ ನಾಡದು ಮುಂಜಾನೆ ರೋಮೆಲ್ ಹಿಟ್ಲರನಾದಾನು. ಹೀಗೆ ಸರ್ತಿಪ್ರಕಾರ ಜರ್ಮನನೋರ್ವನುಳಿಯುವ ವರೆಗೂ ಆ ಲೋಕಕಂಟಕ ಹಿಟ್ಲರನು ಉಳಿದಾನು! ಇದರ ಅರ್ಥ? ವ್ಯಕ್ತಿಯಲ್ಲೇನೋ ಇಲ್ಲ-ಎಲ್ಲ ಇರುವದೂ ದುಷ್ಟ ಪದತಿಯಲ್ಲಿ ನಾವು ಧ್ವಂಸ ಮಾಡಲು ಹೊರಡಬೇಕಾದುದು ಆ ಪದ್ಧತಿಯನ್ನು ಹೊರತು ಯಾವ ವ್ಯಕ್ತಿಯನ್ನೂ ಅಲ್ಲ ನಾಜೀ ಜರ್ಮನಿಯನ್ನು ಪೂರ್ಣ ಸೋಲಿಸಿಯಾದ ಮೇಲೆ ಹಿಟ್ಲರನನ್ನು ಲಂಡನಿಗೆ ತಂದು ಬ್ರಿಟಿಷ್ ಪ್ರಧಾನಿ ಪಟ್ಟಗಟ್ಟಲಿ-ಆವ ನಾಮೇಲೆ ಚರ್ಚಿಲ್ಲನಾಗಲಾರನೋ ನೋಡಲಿ! ವೈರಿಯ ಕೈಯ ಖಡ್ಗವನ್ನು ಕಸಗೊಂಡಿರಾದರೆ, ಆ ಖಡ್ಗದಿಂದಲೇ ವೈರಿಯನ್ನು ಕಡಿಯಲಾಗುತ್ತದೆ. ಇಂದಿನ ಫೇಸಿಸ್ಟ್ ಪ್ರಮುಖ, ಸಮತಾವಾದದ ಬದ್ಧ ವಿರೋಧಿ ಮುಸಲನಿಯು ತಾರುಣ್ಯದಲ್ಲಿ ಉಗ್ರ ಸಮತಾವಾದಿಯಾಗಿದ್ದ; ಮಿ! ಜಿನ್ನರು ಒಂದು ಕಾಲದ ಕಾಂಗ್ರೆಸ್ ಪ್ರಮುಖರಲ್ಲೊಬ್ಬರು! ಆರ್ಥಾತ್ ವ್ಯಕ್ತಿಯೇ ಒಂದು ಪದ್ಧತಿಯಲ್ಲ. ಒಬ್ಬನೆಷ್ಟೇ ಬೆಳೆದರೂ ಒಂದು ಪಂಥ ಅಥವಾ ಪದ್ಧತಿಯಾಗಲಾರ; ಬೆಳೆದರೆ ಸಬಲ, ಇಲ್ಲವಾದರೆ ದುರ್ಬಲ ಉಪಕರಣ ಮಾತ್ರವಾಗಬಲ್ಲ. ನಿಮ್ಮ ಮೇಲೆ ಕಲ್ಲು ಬಂದು ಬಿದ್ದರೆ ಅದನ್ನೊಡೆದುಹಾಕಿ ತೃಪ್ತಿ ಹೊಂದಲಾರಿರಿ; ಕಲ್ಲೆಸೆದವನನ್ನು ಹುಡುಕಿ ತೆಗೆಯುವಿರಿ. ಅಂತೆಯೇ ಒಂದೊಂದು ಹೇಯ ಪದ್ಧತಿಯ ಉಪಕರಣಗಳಾಗಿರುವ ಹಿಟ್ಲರ್, ಚರ್ಚಿಲ್, ಇತ್ಯಾದಿ ವ್ಯಕ್ತಿಗಳನ್ನು ಶಿಕ್ಷಿಸಿದರಾಗದು; ಆ ಪದ್ಧತಿಗಳನ್ನೇ ಧ್ವಂಸಗೊಳಿಸಿದ ಮೇಲೆ, ಅವುಗಳಿಂದೆಸೆಯಲ್ಪಟ್ಟ ವ್ಯಕ್ತಿಗಳನ್ನು ಶಿಕ್ಷಿಸುವ ಪ್ರತ್ಯೇಕ ಕೆಲಸವುಳಿಯದು. ಆದರೂ ಯುದ್ಧಾನಂತರ ಹಿಟ್ಲರ್, ಮುಸಲನಿ ಮೊದಲಾದ ದಂಗೆಗಾರರನ್ನು ಶಿಕ್ಷಿಸುವದು ತಮ್ಮ ಧ್ಯೇಯಗಳಲ್ಲೊಂದು ಎಂದು ಮಿತ್ರಪ್ರಮುಖರು ಸಾರಿರುವರಲ್ಲ? ಅದಕ್ಕೆ ಬೆಲೆ ಕಡಿಮೆ. ಈ ಮಟ್ಟಿಗೆ ಚರ್ಚಿಲ್ ರುಸವೆಲ್ಟರಳಂಥಗಳಿಗೆ ಸಂಚಕಾರ ಕೊಟ್ಟಿಡದ ಜರ್ಮನ್ ಜಾಪಾನರೋತ್ಥೋರಣೆಯೇ ಸರಿಯೆನ್ನಿಸುತ್ತದೆ 'ತಪ್ಪನ್ನು ಮಾಜಬೇಕು. ತಪ್ಪುಗಾರನನ್ನು ಮನ್ನಿಸಬೇಕು' ಎಂಬ ಮಹಾತ್ಮಾಜೀ ತತ್ವದಲ್ಲಿರುವಂತಹ ಅಮೂಲ್ಯತೆ ಲೋಕದ ಇನ್ನಾವ ರಾಷ್ಟ್ರೀಯ ಪಂಥದಲ್ಲೂ ದೊರೆಯದು. ಆದಕ್ಕಾಗಿ ನಾವು ಹೆಗ್ಗಳಿಕೆ ಪಡಬೇಕು.

ಅಪರಾಧವನ್ನು ನಿವಾರಿಸಿದರೆ ನಾಗರಿಕತೆಯ ದೃಷ್ಟಿಯಿಂದ ಅಪರಾಧಿಯು ಸತ್ತಂತೆಯೆ. ಅಪರಾಧಿಯನ್ನು ಮಾತ್ರ ಕೊಂದರೆ ಇನ್ನೊಂದು ಅಪರಾಧವನ್ನೇ ಮಾಡಿದಂತೆ. ಆದ್ದರಿಂದ ಲೋಕ ಶಾಂತಿ ಸ್ಥಾಪನೆ ಹೊಂದಬೇಕಾದರೆ ಪ್ರಾಯಶ್ಚಿತ್ತ ಮಾತ್ರವಿರಬೇಕು-ಪ್ರತೀಕಾರವಿರಬಾರದು.

ಬಾಲಚಂದ್ರ

ಉಪಾಧ್ಯಾಯರ ಏಳಿಗೆಗಾಗಿ ಹೋರಾಡುವ ವಿದ್ಯಾ ವಿಷಯಕ ಮಾಸಪತ್ರಿಕೆ

ವಾರ್ಷಿಕ ಚಂದಾ ರೂ.1-8-0

ಚಂದಾದಾರರಾಗಿ ಪ್ರೋತ್ಸಾಹಿಸಿರಿ.

ಮೆನೇಜರ್-

ಬಾಲಚಂದ್ರ, ಉಡುಪಿ

CHAMPAE'S

Snow & Lastrex

(Sole Distributers for India.)

Sukhananda Stores

Santhekatte, UDIPI, S. K.

ಪ್ರಕಾಶಿನಿ.

ಪುರೋಗಾಮಿ ಮಾಸಪತ್ರಿಕೆ

ವಾರ್ಷಿಕ ಚಂದಾ ರೂ3-0-0

ಬಿಡಿ ಪ್ರತಿಗೆ 0-4-0

ಮಾದರಿ ಸಂಚಿಕೆಗೆ

0-5-0 ಸ್ಟ್ಯಾಂಪಿನೊಂದಿಗೆ ಬರೆಯಿರಿ

ಮೆನೇಜರ್, 'ಪ್ರಕಾಶಿನಿ'

ಉಡುಪಿ.

Printed and Published by K. H. Shetty a tthe Navayuga Press, Udipi.

BHUVNENDRA PRODUCTS LIMITED:

HEAD OFFICE & FACTORY:

KATAPADI, South Kanara,

DEPOT:

Maharta Galli, **HUBLI**.

"BHUVANENDRA"

GARBHAPAL

Tried and appreciated by eminent Doctors. Proved to be the best remedy where even allopathic medicines failed. A specific for threatened or habitual abortion and other uterine troubles, Must be commenced soon after conception and continued up to the time of delivery.

Our stockists at Udipi—1 Dr. Nayak's consulting Rooms & Pharmacy, 2. Dr. P.G. Achar's Pharmacy 3. Dr. K. Sheshagiri Pai, L. I. M. 4. Dr. K. Venkat Rao, 5, R. S. Shenai, 6, Navabharath Book Depot

ಜನಪ್ರಿಯನಾದ ಕಿರಿಯರ ಪ್ರಪಂಚದ

ಪ್ರಕಟಣೆಗಳು.

ಮಧುವನ	(ಕಥಾಸಂಗ್ರಹ)	೩	೦ ೦
ಪ್ರಕಾಶ	(ನಾಟಕ)	೧	೧೩ ೦
ಭಾರತೀಯ	ಕಥೆಗಳು	೦	೧೪ ೦
ನಾರೀ ಹೃದಯ	(ಕಥೆಗಳು)	೦	೧೪ ೦
ದೇಶಭಕ್ತ	(ನಾಟಕ)	೦	೧೪ ೦
ಕಾವ್ಯ ಸಾಮ್ರಾಜ್ಯ	(ಕವನಸಂಗ್ರಹ	೦	೧೩ ೦
ಪ್ರೇಮ ವಿಜಯ	(ನಾಟಕ)	೦	೧೩ ೦
ವೈಭವ [illegible] ಯಾರು	(ನಾಟಕ)	೦	೧೩ ೦
ನಂದಾ [illegible]	ಕಥಾ ಸಂಗ್ರಹ)	೦	೧೦ ೦
ಸನ್ಯಾಸಿಯು ಘೋಷಿನಲ್ಲಿ	ಕಾದಂಬರಿ)	೦	೮ ೦
ರಂಗಭೂ[illegible]	ನಾಟಕ	೦	೮ ೦
ಸಂಶಯ [illegible]	(ನಾಟಕ	೦	೮ ೦
ಸೇವಾವ್ರತ	ನಾಟಕ	೦	೮ ೦
ಕುಶಲವ	(ನಾಟಕ	೦	೫ ೦
ಹೆಂಡ್ತಿ [illegible]	ಪ್ರಹಸನ)	೦	೪ ೦
ಪುರುಷ [illegible]	,,)	೦	೪ ೦
ಸ್ವತಂತ್ರ ಜೀವನೋಪಾಯ	(,,	೦	೩ ೦
ನಾಡ [illegible]	ಕಥೆಗಳು)	೦	೩ ೦
ಮುಂದಿನ [illegible]	(ಸಂಬಂಧ)	೦	೩ ೦

ನವಭಾರತ ಪುಸ್ತಕ ಭಂಡಾರ, ಉಡುಪಿ.

If you are a Book Lover

AND

Kannada Books are your special interest

THEN

Please enquire at

Navabharat Book Depot

REGD. PUBLISHERS & BOOK SELLERS,

UDIPI - - - - S. INDIA.

for your requirements.

We have always in stock

the latest books published all over Karnatak

THE PRESS

FOR *Neat* *Clear* *Artistic printing*

The Navayuga Press

UDIPI

PRINTERS FOR-

NAVAYUGA

ANTARANGA

BALACHANDRA

PRAKASHINI

We undertake all kinds of Book work, Job work etc.

OUR MOTTO:

Cheap, Efficient and Prompt Service.

PROPRIETORS:

The Navayuga Enterprise Ltd, Udipi.

Issue at once
letter to SPA

Pub (Fort) Dept

Memo. No. 39561/44/3 9, 5. 944.

The Indian Press (P.) Ltd, ...
Publishers of 'Antarangi' - ...nd
of warrant. Rep. petition from Sri K.
Ramaya Shetti 9, 5. 1944

Reference to the D.M. of S. Kanara
...warrant issued on the
...declaration that is published
...in the paper mentioned.
...D.M. is also requested to
...on the general tone of
'Antarangi'. A reply to this
...should be sent so as to reach the
...on or before the 15th Sept.
1944

In the meanwhile the Publishers
...having granted time
till 24th Sept. 1944 for the deposit
...the security of Rs 500/- made
...memorandum dt. Publication
..., 1944 (copy enclosed).

5/9/44 : 5/9/44

...with
...D.M.
...2M of
...Kanara.
...encl. to be
...times with reply
...with copy of memo.
...D. 15/9/44

Memo. No. 39561/44/4 Dt. 5-9-44.

—

Indian Press (E.P.) Act, 19..
Publisher of 'Antaranga' - demand
of security - Ref. petition from Sri
K. Honnaya Shetti dt. 21-8-1944. Pl. 111 - 42 CF

—

The representation is under
the consideration of the Govt. & orders
on it will issue separately. In the
mean time the petitioner is ~~permitted~~
granted time upto & inclusive of
24th Sept. 1944 for the deposit of the
security of Rs 500/- demanded in the
Govt's notice dt 10th August 1944. Pl. 1 CF

~~The~~
H.
5/9/44

M. 5/9/44

Dept to issue (1) notice
6.9.44

(1) To Sri K. Honnaya
Shetty, Publisher
of 'Antaranga',
Udipi

(2) Copy to the D.M. of S. Kanara.

Drftd. C.
V. S. Kamath. 8/9

Pub. (Genl) Dept

Memo. No 39561/44/5 Dt. 21.9.44.

—

Indian Press (E P) Act, 1931 –
Publisher of 'Antaranga' – Demand
of security – Rg. letter from the
D.M. of ~~Mangalore~~ S. Kanara, C. 1131-44 Dt 11.9.1944

—

The Govt. will consider the
question of withdrawing their Notice
Dt 10-8-1944 demanding a Security
of Rs 500/- from Sri K. Honnaya Shetty,
the publisher of
Antaranga', if ~~the publisher~~ ~~Honnaya Shetty~~ he publishes in the next
issue of the periodical an uncondi-
tional apology to the satisfaction
of the Dt. for having published the
objectionable article in question.
In the meanwhile the publisher is
granted time till 24th October
1944 for the deposit of the security
demanded in the Govt' notice
referred to above.

The DM of ~~The~~ S. Kanara is
requested to inform Sri K.
Honnaya Shetty accordingly and
to report to the Govt. as soon as the
apology is published sending also a copy of
the issue containing the apology.

21/9/44

Telegram No 39561/44/6 Dt 21.9.44

To

Distrate, Mangalore

Tel Dpt dtd 21.9.44

2.30

Ref. your letter C-1131-44 dated Septr. 11 regarding demand of security from publishers Antaranga. Stop Time extended till 24th October Stop Order follows.

21/9/44

21/9/44

p. 46 CF

Pub Secret Please see overleaf

47357

5°

SECRET TEL 23SEP.66

Rpbd Chief Secy Govt of Maharashtra

Pl Pray decision

Publication Antaranga

Orders have already gone I believe in this case Despatch telegram below to Editor Publicity with copy to Collector

No 39511/44/7 d 25.9.44.

Your telegram of 23rd aaa Time extended aaa refer Collector for orders

Resumenti
24/9/44.

1.30
Let ph
25.9.44
P.C. to Coll: S.K.
ph
25.9.44

Ref
~~M.D.Dis~~.1131-44(Confdl.48037 S.Kanara Dt.Magistrate's Office
4-10-44, Mangalore, 2nd October 1944.

From

Rao Sahib Sri P. Ramadoss, B.A.,
Dt.Magistrate of South Kanara.

To

The Chief Secretary to Government,
M a d r a s.

Sir,

CHIEF SECRETARY 4-OCT 1944 GOVERNMENT OF MADRAS

Indian Press (Emergency Powers) Act, 1931 - Publisher of Antharanga - Demand of security - Publication of apology - Report submitted.

Refce: Government Memo.(Confdl.), 39561-44-5 (P.G.), dated 21.9.1944.

The publisher had remitted to me the security deposit amount of Rs.500/- by T.M.O. on 25.9.1944, pending publication of the apology referred to in the Govt.Memo. cited above. I received the amount and kept it in amanath. He was informed on 25.9.1944 of the contents of the Government order. In accordance with it he has published an unconditional apology, both in English and Kanarese, in the issue of his ------ periodical dated 3.10.1944, and has sent me an advance copy of the same, which is enclosed. The apology appears satisfactory and acceptable. The notice may kindly be withdrawn. The amount will be returned on receipt of orders.

District Magistrate.

Pub (General) Dept

G.O. Ms. No. 2984 d. 10-10-44

Indian Press (E.P) Act, 1931 - Section 7(3)
Antharanga, Udipi, S. Kanara Dt -
Demand of Security of Rs. 500/- Notice
withdrawn

Order. H. E. The Governor of Madras
is hereby pleased to direct that
the notice d. 10-8-'44 requiring
Sri K. Honnaya Shetti, the publisher
of "Antharanga" to deposit a Security
of Rs 500/- be withdrawn.

11/10

To. The D.M. of S. Kanara
W.r.t his letter No 1131-44
(confdl) d. 2.10.44
Copy To The Pub (Press) Dept.

9/10/44 9/10/44 10/10/44

(Press)

Public (~~General~~) Department.

Memo. No. 13220/45-1 Dt. 23.3.45

Press - Indian Press (Emergency Powers) Act, 1931 - Section 7(3) - "Antharanga" - Notice demanding security - Withdrawal of.

Ref:- Letter from Sri K.Honnaya Shetty, Managing Editor "Antharanga", dated 31st August 1944.

13220

Postage stamps worth Rs.4/- sent with his letter cited are returned herewith to Sri K. Honnaya Shetty, Managing Editor, "Antharanga", Udipi, South Kanara district. He is requested to acknowledge their receipt.

To

Sri K. Honnaya Shetty,
Managing Editor, "Antharanga",
Udipi, South Kanara district
(with 32 one anna stamps)
(By Regd. Post)

Note:- The stamps in question were received from the party with his letter cited while the subject was being dealt with in Public (General)--vide 'A' on p.17 c.f. of G.O. No.298 Public (General), dated 10-10-1944. The stamps should have been returned to the party as they were not utilised then. They may now be returned to him. The draft Memo. above is for approval.

Through Pub (Genl)

Order—No. 2064, P.H., dated 16th May 1940.

The appended notification will be published in the *Fort St. George Gazette*.

2. The Director of Public Health is informed that under draft rule 2 appended t these rules, the Health Officer may require the owner or any person having control ove any lake, spring, etc., to have samples of water from the source of water-supply to b analysed in the King Institute or any other laboratory specified by the Government According to the wording adopted in the draft rule, the Health Officer is not bound t require the analysis of samples of water in every case. He can exercise his discretion i the mat

(By order of His Excellency the Governor)

R. V. KRISHNA AYYAR,
Secretary to Government.

Executive Authorities of Municipalities (through the Chairmen).
Presidents of District Boards (with copies for Presidents of Panchayat Boards).
Commissioner, Corporation of Madras (through the Mayor).
Director of Public Health.
Surgeon-General.
Examiner of Local Fund Accounts.
Inspector of Municipal Councils and Local Boards.
Superintending Engineer (Public Health).
Local Administration Department.
Legal Department.
Superintendent, Government Press, for publication in the *Fort St. George Gazette*.

APPENDI

NOTIFICATION.

The following draft of certain rules which it i proposed to make in exercise of the power conferre by section 128 of the Madras Public Health Act, 193 (Madras Act III of 1939), is hereby published as require by clause (*a*) of sub-section (1) of section 130 of the sai Act for general information.

Notice is hereby given that the draft will be furthe proceeded with after six weeks from the date of publica tion of this notification and that any objection o suggestion which may be received with respect there t before the expiry of the period aforesaid will be consi dered by the Government of Madras.

DRAFT RULES.

1. These rules may be called the Protection and Examination of Sources of Water-supply Rules, 1940.

2. (1) Before taking action under section 24 of the Madras Public Health Act, 1939, in regard to any lake, spring, well, tank, reservoir, pond or other source of water-supply (not being a running water-course such a river, stream or canal) which is used for drinking, th Health Officer may, at any time by written noti require the owner of, or any person having control ove such lake, spring, well, tank, reservoir, pond or oth source of water-supply to have samples of water fro such lake, spring, well, tank, reservoir, pond or oth source of water-supply analysed within a reasonab time to be specified in the notice in the King Institu of Preventive Medicine, Guindy, or in any other inst tution recognized for the purpose by the Governmer from time to time.

(2) If the owner or person aforesaid fails or neglec to comply with any notice issued under sub-rule (within the time specified therein, the Health Officer ma himself arrange for the analysis of samples of water fro the source of water-supply concerned in the King Inst tute of Preventive Medicine, Guindy, or in any othe institution recognized for the purpose by the Governmer from time to time.

3. All the expenses in connexion with the analysis samples of water from any of the sources of water-suppl referred to in rule 2 shall be paid from the funds of th local authority concerned.

ANTARANGA

Illustrated Kannada Weekly

UDIPI

30th March'45.

14294

The Superintendent,
Govt.of Madras, Public (Press) Department.

Sir,

Sub: "Antaranga"- Notice demanding security- Withdrawal of- Postage stamps worth rupees two - returning of -Acknowledgement of.

I am in receipt of your Memorandum.No.13220/45-1 dated 23rd March'45. As desired and instructed in the said memorandum, I acknowledge receipt of the postage stamps worth rupees two (32 one annastan

Managing Editor.





The Superintendent,

Public (Press) Department.,

Government of Madras.

Pub(Press) Dept

MADRAS.

P.I cuttg

Subd for persal. This and the memo at (E) may be added to the G.O. at (D)

2.4.45

Secy.

2.4.45

NOTE

Public (Press) Department.

Newspapers and Periodicals - Anthranga (Kannada monthly) dated 13-6-1944 - Objectionable article entitled SACRED ATONEMENT - Publication of -

Ref; Letter from the District Magistrate, South Kanara No.1131/44/M, dated 29-6-44.

* * *

The D.M., South Kanara has forwarded for orders of Govt. a translation of an article entitled 'Sacred Atonement' published in 'Anthranga' a Kannada periodical in the issue dated 13-6-44. Particulars of the periodical are furnished in the statement at flag D. (The D.M. states it is a monthly, but according to the printed statement it is ~~reported to be~~ a weekly.)

2. The portions marked in blue on ~~pp.3-4~~ pp 3 & 4 c.f. ~~are~~ is highly objectionable and actionable under rules 34(6)(e) and (x) read with rule 34(7) of the D.of I.Rules. Legal may see for remarks.

3. The D.M. asks for orders as to the action to be taken against the Editor and Printer and ~~the~~ publisher of the monthly. ~~Legal may see for advice.~~ "Anthranga" seems to be an obscure Kannada paper, which has not come to the notice of Govt.before. Usually a warning is given for the first offence, but the article is so objectionable that something more drastic seems called for. ~~see para 3(c) of India's letter printed on p.3 of the second Vol. of the printed papers at (F).~~ Please see para 3(c) of India's letter printed at p 3 of the second Vol of the printed papers at (F). ~~of the papers put up.~~ The various forms of action other than prosecution which are open to Govt. are mentioned in para.3(f) on pp.3-4 of ~~the second Vol. put up of the papers at flag~~ those papers (I).

A ~~highly~~ prejudicial Tamil pamphlet entitled 'Fulfilment of Prophecy' was printed at the Bible Students ~~Saghyam~~ Pakkiam Press, Coimbatore, in 1942. This pamphlet was reproduced in the Tamil magazine entitled 'the Bible Students monthly magazine Coimbatore. In G.O.No.1514, Pub (General), dated 27-5-1943 the Govt.prohibited under rule 40(1)(d) and (e) of the D. of I Rules the further publication, sale and distribution of the pamphlet and also declared the pamphlet and every copy thereof to be forfeited to His Majesty. In G.O.No.2136, Pub (Press), dated 21-7-1943 the Govt. under rule 41(a)(1) of the D. of I. Rules directed the Editor of the Bible Students Monthly Magazine to submit to the D.M., Coimbatore for scrutiny for a period of six months all articles before they were published in any issue of the said magazine.

With the Compliments of the Principal Information Officer,
Government of India

CHIEF SECRETARY
5 NOV 1943
GOVERNMENT OF MAURI

UNOFFICIAL NOTE

Unofficial Notes are issued for the information of the Press. They may be published as worded or used as background material.

Unofficial Notes are not communiques and are issued only on the understanding that their source will not be referred to in any way i what is published.

Passed for
Publication

No. F. 21/1/43-SPS.

AUSTRALIA'S AIRCRAFT INDUSTRY

CANBERRA, By Mail. -- The Australian workmanship and enterprise, which created a great aircraft industry in double-quick time, were praised by members of the British Press delegation, who saw, in the making and in the air a Beaufort Bomber and the new interception fighter Boomerang both of which had recent victories over New Guinea to their credit.

Sir Walter Layton, Leader of the Delegation, said that what impressed the Delegation most was the magnitude of the task which had been undertaken in aircraft production. It seemed incredible that Australia, with no background of aircraft production whatever, should have achieved so much.

* *

THREE AIR BASES GUARDING RABAUL KNOCKED OUT

CANBERRA, By Mail. -- Melbourne Herald war correspondent with the United States Fleet in the South Pacific, says that Admiral Halsay's American and New Zealand Airmen have succeeded in knocking out at least temporarily three Japanese air bases guarding the eastern approaches to Rabaul and protecting the southern coast of Bougainvill

Admiral Halsay's air offensive has been stepped up in tune with General MacArthur's and now his Navy and Army bombers are pounding Kahili and Kara airfields on Bougainville so intensively that the Japanese are not getting an opportunity to repair the runways. The fact that there was no fighter interception indicates that the Shortland Island bases are also inoperative.

R/HRV/AG/1/11/43. L.P.

NOTE TO EDITOR: ANOTHER UNOFFICIAL NOTE APPEARS ON THE REVERSE

2263/6.7.44

-2-

The Madras Press Advisory Committee may be consulted before any action is taken unless the Govt. consider the matter is very urgent, in which case the decision of the Govt. may be communicated to the Madras Press Advisory Committee afterwards.

Legal may be consulted first.

Pub. (Genl.) BM 3.7.44

4/7/44 4/7/44 3/7/44

4/7/44

5/7/44

Legal

Pub (Press) dept

Lr. 2228/44-1

5.7.44



The restrictions in the C-f are "prejudicial reports" under the meaning of rule 34(7) of D of I rule. Portions of the matter published fall under the scope of rule 34(6)(e)(f)(k) of D of I rule.

Legal U.O.No. 4671C-1 5/7/44

Pub (Press) 5-7-1944

sity Bill consists of the Accountant-General, the Director School Education, Muntazim Bahadur S.N.Dube, Sardar M.V.Kibe, Wafadar-i-Dowlat A.R.Khan, Mr. M.H.Dravid and Mr. Sukhchand Jain.

There were twenty-three resolutions on the agenda referring to various subjects. Three of them lapsed owing to the absence of movers, five were withdrawn and one was lost. The rest fourteen were passed. One of them was a condolence resolution on the death of the late Director School Education. Two resolutions related to the request for information regarding the health of His Highness the Maharaja Holkar, one of them requesting publication of such information every forthight in the Government Gazette and the other one desiring that the loyalty of the House be conveyed to His Highness along with an enquiry about his health. One of the resolutions passed prayed that the services of no Government servant should be terminated during the continuance of the present war. The Council also recommended that the dearness allowance granted to the lower paid staff be increased to at least Rs. 10/- to persons getting Rs. 40/- and Rs. 8/- to those getting from Rs. 41 to

Public (Press) Deptt.

The Legal Deptt are of the view that the translation in the C.F. are "prejudicial reports" within the mean-ing of the D. of I. Rules. please see their note f/2 ante. Orders are solicited on paras 3-4 of A note on f/1-2 ante.

6/7/44

This seems to be a fit case for demanding (X) Security. The matter may be placed before the Prov. Press Advisory Committee.

6/7/44 6/7/44 U-S / C.S

ADVISER 10 JUL 1944 PUBLIC DEPARTMENT

Security may be demanded from both Press & Publisher — & the advice of the Committee obtained on this proposal

7.7.44

A1 May be put before Committee

HE 7.7.44

7/7/44

CHIEF SECRETARY 19 JUL 1944 GOVERNMENT OF MADRAS

A draft letter to the Convener, M.P.A.C and a draft memo to the D.O., South Kanara are submitted for approval

11/7/44 11/7/44 U.S 12/7/44 C.S 12/7/44

[Issued as Letter No. 2228/44-2 dated 13.7.44.
Issued as Memo. No. 2228/44-3 dated 13.7.44]

P.A.C. recommend that an undertaking not to repeat such remarks shall be obtained from the Editor

13.7.44

Proceedings of the meeting of the Madras Press Advisory Committee, held on Tuesday, 1st August,1944, at 12 noon at the Chief Secretary's room, Fort St. George, Madras.

PRESENT: Mr. J.B.Brown, C.S.I., C.I.E., I.C.S.
(Chief Secretary to Government)
,, K.P.Viswanatha Iyer ("The Hindu")
,, S.V. Swami .. ("Free Press")
,, A.A.Hayles .. (The "Mail")
,, Shambu Prasad.. ("Andhrapatrika")
,, Abdul Hameed Khan ("Deccan Times")
,, C.R. Srinivasan ("Swadesamitran"),
CONVENER.

Mr. T.A.V. Nathan, the new Special Press Adviser, who took charge of his duties yesterday, was present.

2. GOVERNMENT'S LETTER NO.2229/44-2 DATED 13th JULY 1944 RE. PUBLICATION OF AN OBJECTIONABLE ARTICLE IN "ANTHARANGA" (KANNADA MONTHLY) DATED 13th JUNE 1944:

In the view of the Committee, the article complained of contains many passages of unbalanced and inflammatory writing As this is the first time the paper comes before the Committee, the Committee is desirous of giving the editor a second chance before drastic action is recommended. The editor should be warned that if anything like this article and in this strain is published in the journal in future the Committee will have no option except to support Government in any action they may desire to take.

Public (Press) Deptt.

Submitted for perusal and orders. Attention is invited to the orders in circulation on p 3 ante.

24/8/44. The sense of the Committee was, as noted by CS. on p.3 ante, that an undertaking should be obtained from the Editor not to repeat such remarks or indulge in such language in future as may be done, as this is the first time that the Journal has come to the notice of Govt. for intemperate & unbalanced writing. If such an undertaking is not forthcoming, security may be demanded.

Secy. 25/8/44.

I doubt whether an undertaking without the backing

of security is of much use. Security may be demanded from both keeper of the Press & Publisher Rs500/- from each will suffice.

8844

A, agree AH 4844

HE Agree. AH. 5/8/44

CHIEF SECRETARY 7 AUG 1944 GOVERNMENT OF MADRAS

File may be sent to Public (~~General~~) Department for issue of orders. On receipt of a copy of the order, it will be communicated to the Convener of the P.A.C. with a covering letter.

Illegible 7.8.44

Public (Genl).

U.O. No. 2228-4
8.8.44.

Pub. (Genl) dept.

With reference to the orders above three drafts are subd. for approval. In this case the keeper of the Press & the Publisher of the paper are one & the same person. It is presumed that security of Rs 500/- should be demanded of him in his capacity of keeper of the Press & another Rs 500/- in his capacity of Publisher of the paper.

Legal may see the draft orders before issue.

8/8/44

It seems sufficient to demand one security of Rs 500 from Honayya Shetti as the publisher.

No 6/8/44
S.P.A. & S.'s suggestion to for orders
Illegible 8.8.44
C.S. Jls 9844
Legal

LEGAL DEPARTMENT.

The notice in draft II is in order.

Draft III is unnecessary in view of the orders of th

Pol/Pub.(Genl)
U.O. 39561/44/1
9.8.44.

ASSISTANT SECRETARY 9-AUG1944 LEGAL DEPARTMENT

Chief Secretary at page 5 ante.

1 R91
9/8/44

Legal U.O 5393C-)
9/8/44

Pub Conl,

9/8/44

Pub. (Genl) dept

Drafts I & II below may issue

9/8/44

Issued notice dt 10th August 1944. f. 10 CF.
From the D.M. of S. Kanara dt 24.8.44 f. 12 CF
From the Publisher of Antaranga dt 31/8/44 ff. 14-43 CF

Please see the petitions from the publisher of Antaranga on ff. 14-17 CF. He represents that he is a loyal subject actively co-operating in all War efforts & War propaganda, that in having published the article 'Sacred Atonement', his intention was to show that he does not hold the views contained in the objectionable paragraph & that he condemns the views & spirit of vindictive punishments as described in that para. He also apologises for having published the article & is also prepared to publish the apology in his Magazine. It is therefore for orders if his Request for cancelling the notice demanding him to deposit Rs 5000/- will be cancelled. f. 14 CF f. 15 CF f. 17 CF f. 10 CF

6/9/44 The full text of the article was already here on ff 3-4 CF & was considered.

The only question seems to be whether the demand for security can be withdrawn on his undertaking to publish an apology in the Magazine. B.D.K

This seems a fit case for Pub. Prosecutor to consider

M.S 5/9/44
S.P.A.

(A) As the Editor is willing to publish an unconditional apology, the order demanding security may perhaps be withdrawn.

If this is agreed to, the Editor may first be asked to publish the unconditional apology, a draft of which may be submitted by him to the District Magistrate of South Kanara, before publication, for approval.

The time for paying security may be extended till the usual date of publication of the next number of "Antharanga," and after publication of the apology, the order may be withdrawn.

K.K.M. 5.9.44

C.S.

Extend the time to 24th Sept. Ask DM for his remarks on the Publisher's representation. What he has been suppressing first. Advise the general tone of the paper

5/9/44

Two drafts are submitted for approval

5/9/44

M.S 5/9/44
S.P.A. (after noon) K.K.M. 6.9.44

(Issued as Memo No. 39561/44-3 dated 5-9-44)
(From the D.M. South Kanara Rc. C.113-46 of 11-9-44)

Please see this dept's Memo on p 44 and the D.M's reply on p 46 Cf. The file is submitted for orders.

S.M.P. 13-9-44
13/9/44

M 13/9/44
S.P.A. The D.M's report is favourable. Orders are requested on (A) above.
C.S.

K.K.M. 14.9.44 P.T.O.

See the orders at P 1a above, the letter from the Publisher at PP 14-17 Cr. and the D M's report at P 4 & 6.

As the D M's report is favourable Govt. may as an act of grace withdraw the order demanding security. 2. I do not recommend insistence on publication of an apology. That would only direct attention to an article probably long forgotten.

[illegible] 1944

A/. DE

The order may be withdrawn on publication of the apology. I do not think it will result in many people looking up the article in question. I do not think they should be allowed to publish an article like this & get away with it altogether. It will be an example to others.

AH
1944

CHIEF SECRETARY
20 SEP 1944
GOVERNMENT OF MADRAS

Japp. with A1.
AH.
18/9/44

The time granted for the deposit of the security will expire on 24/9/44. p. 45 (F)
This may perhaps be extended by one month. The next issue of the periodical will be on or about the 13th October.

A draft memo. & a draft telegram are submitted for approval.

[illegible] 21/9/44 [illegible] 21/9/44 [illegible] 21/9/44 [illegible]

[Issued as Memo No. 39561/44-6 dt. 21-9-44.] p 44
[Issued as ~~Memo No~~ Telegram No. 39516/44-6 dt. 21.9.44.] p 45
[From The D M of S. Canara No. 1131/44 (Confl) dt. 2-10-44] p 52

Please See the letter from the D.M of S. Kanara at p.52.cf. In view of the D.M's recommendation it is Submitted for orders Whether the apology tendered by the publisher of "The Andhara may be accepted & the notice d. 18-8-44 withdrawn under the ~~provisions of Section~~ deposited ~~paid by the~~ publisher refunded to him

5.10.44 5/10/44 The apology is on p.2 of the issue at (P) and was accepted by the D.M. The notice may be withdrawn.

S.P.A 6/10/44 6.10.44 6/10/44

C.S

Box

Draft Submitted for approval

9.10.44 9/10/44 9/10/44.

3–10–1944



ಇಟಲಿಯಾನ್ ರಂಗದ ಎಂಟನೆ ಇಂಡಿಯನ್ ಡಿವಿಜನಿನ ಕಮಾಂಡರ್ ಮೇಜರ್ ಜನರಲ್ ಡಿ "ಫಾಕಾ" ರಸ್ಸೆಲ್‌ರವರು ತನ್ನ ಕಾರ್ಯ ಕ್ಷೇತ್ರದ ಹೊರಗಣ ಪ್ರದೇಶದಿಂದ ತನಗೆ ಬಂದ ಸಂದೇಶವನ್ನು ಓದುತ್ತಿರುವ ದೃಶ್ಯ.

1905 RECORD OF OVER 38 YEARS 1944
THE CANARA BANKING CORPORATION LIMITED,
UDIPI

ANTARANGA

ಚಲನಚಿತ್ರತಾರೆಯರಂತೆಯೇ ನೀವು ಚರ್ಮವನ್ನು ಕಾಪಾಡಿಕೊಳ್ಳಿರಿ!

ಶೋಭನಾ ಸಮರ್ಥ್

ಶೋಭನಾ ಪ್ರತಿದಿನವೂ ಒಂದು ಸೌಂದರ್ಯ ಸಾಧನೆಯನ್ನು ಅನುಸರಿಸುತ್ತಾಳೆ ಬೆಳಿಗ್ಗೆ ಮತ್ತು ಸಾಯಂಕಾಲ ಆಕೆ ಲಕ್ಸ್ ಟಾಯಿಲೆಟ್ ಸೋಪಿನ ಚುರುಕಾದ ನೊರೆಯನ್ನು ತನ್ನ ಚರ್ಮಕ್ಕೆ ತಟ್ಟಿ ಶುದ್ಧವಾದ ನೀರಿನಿಂದ ತೊಳೆದುಕೊಳ್ಳುತ್ತಾಳೆ. "ಈ ಸುಲಭವಾದ ಪ್ರತಿ ದಿನದ ಸಾಧನೆಯು ನನ್ನ ಚರ್ಮವನ್ನು ಕೋಮಲವಾಗಿಯೂ, ನುಣುಪಾಗಿಯೂ, ಕಳಂಕರಹಿತವಾಗಿಯೂ ಇಡುತ್ತದೆ" ಎಂದು ಆಕೆ ಹೇಳುತ್ತಾಳೆ. ನಮ್ಮ ಚಲನ ಚಿತ್ರ ತಾರೆಯರಲ್ಲನ್ನೇಕರು ಹೀಗೆಯೇ ಹೇಳುತ್ತಾರೆ.



ಲಕ್ಸ್ ಟಾಯಿಲೆಟ್ ಸೋಪು

ETS. 127-111-60 KN

LEVER BROTHERS (INDIA) LIMITED

ಅಂತರಂಗ
ANTARANGA

ವಾರ ಪತ್ರಿಕೆ Weekly

ಸಂಪುಟ ೧೩. ಸಂಚಿಕೆ ೩೧೪.

Vol. 13. No. 314.

ವಾ. ಚಂದಾ ರೂ. ೪—೮—೦

ಬಿಡಿ ಪ್ರತಿಗೆ ರೂ. ೦—೧—೬

ಸಂಪಾದಕರು:
ಕೆ. ಎಚ್. ಶೆಟ್ಟ
ಎಂ. ವಿ. ಹೆಗ್ಡೆ.

ಸಲಹೆ ಗಾರರ ಮಂಡಲ:
ಶ್ರೀಗಳಾದ ಬಿ. ವಾಸುದೇವ ರಾವ್ ಬಿ. ಎ., ಬಿ. ಎಲ್.; ಕೊರಡ್ಕಲ್ ಶ್ರೀನಿವಾಸ ರಾವ್; ಪಿ.ವಿ. ಉಪಾಧ್ಯಾಯ ಬಿ.ಎ.ಎಲ್.ಎಲ್.ಬಿ.; ಪಿ ದಯಾನಂದ ನಾಯಕ್, ಬಿ. ಎ. ಎಲ್. ಎಲ್. ಬಿ.; ಕಟಪಾಡಿ ಶ್ರೀನಿವಾಸ ಶೆಣೈ, ವಿಶಾರದ.

3—10—1944





ತಾಳ—ಮೇಳ



'ಗಾಂಧಿ-ಜಿನ್ನಾ ಮಾತುಕತೆ ಮುರಿದು ಬಿತ್ತು'.

ಆದಿಯಲ್ಲಿ ಪರಸ್ಪರ ಆಲಿಂಗಿಸಿಸಿಂತ ಗಾಂಧಿ ಜಿನ್ನರ ಭಾವಚಿತ್ರವೆತ್ತಿದಂತೆಯೇ, ಕೊನೆಯಲ್ಲಿ ಇವರಿಬ್ಬರನ್ನೂ ಇದಿರಿದಿರು ನಿಲ್ಲಿಸಿ 'ಫೋಟೋ' ತೆಗೆಯಲು ಬಾತ್ಮೀದಾರರು ಮರೆತಿರಲಾರರೆಂದು ನಂಬುತ್ತೇವೆ.

○

'75 ಲಕ್ಷದ ಗುರಿಯಿರುವ ಕಸ್ತೂರಿ ಬಾ ನಿಧಿ 85 ಲಕ್ಷ ಮಿಕ್ಕುವ ಸಂಭವವಿದೆ'.

ಕಷ್ಟಕ್ಕಿಟ್ಟಿತು—75ರ ಮುದುಕ ಗಾಂಧಿಜೀ 85ರ ಹೊಣೆ ಹೊರಬೇಕಾಯಿತು.

○

'ಅಲ್ಲಾಭಕ್ಷ್ಯರ ಕೊಲೆಯ ಸಂಬಂಧವಾಗಿ ಸಿಂಧಿನ ಮಂತ್ರಿ ಮಿ. ಕುಹ್ರೋ ಇವರ ದಸ್ತಗಿರಿಯಾಗಿದೆ.

ಇವರನ್ನಿನ್ನು ಜೈಲುಖಾತೆಯ ಮಂತ್ರಿಯೆನ್ನಬಹುದೆ?

○

'ಈ ಬಾರಿಯ ಕ್ವಿಬೆಕ್ ಸಮ್ಮೇಲನದಲ್ಲಿ ರೂಸವೆಲ್ಟರು ಚರ್ಚಿಲ್ಲರೊಡನೆ ಭಾರತ ಸಮಸ್ಯೆಯ ಪ್ರಸ್ತಾಪವೆತ್ತಿರಬೇಕು'.

ಆದರೆ ಕೂಡಲೇ ಮಿ. ಚರ್ಚಿಲ್ಲರು 'ಈ ಕುರಿತು ಚರ್ಚಿಲ್ಲ' ಎಂದಿರಬೇಕು.

○

'ಅಮೆರಿಕಾನರು ಸ್ವಾರ್ಥದೃಷ್ಟಿಯಿಂದ ಭಾರತದ ಕುರಿತು, ವಿಶೇಷಾಸಕ್ತಿ ತೋರಿಸಹತ್ತಿದ್ದಾರೆ.-ಬ್ರಿಟಿಷರ ದೂರು.

'ಆನಾಸಕ್ತಿ ಯೋಗ'ದ ಮಿಲ್ಯಾಂತರ ಪ್ರತಿಗಳನ್ನು ಆಚ್ಚುಹಾಕಿಸಿ ಅಮೇರಿಕದಲ್ಲೆಲ್ಲಾ ಧರ್ಮಾರ್ಥ ಹಂಚಲಿ.

○

'ಹಿಟ್ಲರನು ಪಲಾಯನವಾಗಿರಬೇಕು ಇಲ್ಲವೇ ಅಂದಿನ ಸೇನಾ ಬಂಡಾಯದಲ್ಲಿ ಮಡಿದಿರಬೇಕು. ಇಲ್ಲವಾದರೆ ಈ ಸಂಧಿಗ್ಧಕಾಲದಲ್ಲಿ ಈ ರೀತಿ ಮೌನಧಾರಣೆ ಮಾಡುತ್ತಿರಲಿಲ್ಲ'—ಮಿತ್ರ ರಾಷ್ಟ್ರಗಳ ಊಹೆ.

ಅಲ್ಲವೇ ಅಲ್ಲ, ಗಾಂಧೀ ಭಕ್ತನಾಗಿ ಅಹಿಂಸಾವೃತ ಮತ್ತು ಮೌನಧಾರಣೆ ಮಾಡಿರಬೇಕು-ಹಿಂದೀಯರಾದ ನಮ್ಮ ಊಹೆ.

○

'ಗಾಂಧಿಯವರನ್ನು ನನ್ನ ಅಭಿಪ್ರಾಯಗಳಿಗೆ ಮತಾಂತರಗೊಳಿಸಲು ಶಕ್ತನಾಗಲಿಲ್ಲವೆನ್ನಲು ವಿಷಾದಿಸುತ್ತೇನೆ' ಮಾತುಕತೆಯ ಅಪಜಯಾನಂತರ ಮಿ. ಜಿನ್ನ.

ಅದೇ ಸಮಯದಲ್ಲಿ ತಾನು ಗಾಂಧಿಯವರಿಂದ ಮತಾಂತರಿಸಲ್ಪಡದಿದ್ದುದಕ್ಕಾಗಿ ಸಂತೋಷಿಸುವದು ಬೇಡವೆ?

○

'ಈ ಅಪಜಯವು ಮುಂದಿನ ಮಹಾ ಪ್ರಯತ್ನಕ್ಕೊಂದು ಪ್ರೇರಣೆ'—ಗಾಂಧಿಜಿ.

'ಸಾಯುವದು ಸ್ವರ್ಗ ಸಂಪಾದನೆಗಾಗಿ' ಎಂಬಂತೆ.

'ಭುವನೇಂದ್ರ' ಔಷಧಗಳನ್ನೇ ಉಪಯೋಗಿಸಿರಿ
ಭುವನೇಂದ್ರ ಪ್ರೊಡಕ್ಟ್ಸ ಲಿಮಿಟೆಡ್, ಕಟಪಾಡಿ.

AN APOLOGY

We regret to inform our readers that the article entitled 'ಪವಿತ್ರ ಪ್ರಾಯಶ್ಚಿತ್ತ' (Sacred atonement) which appeared in Antaranga dated 13th June '44 has been considered objectionable by the Government of Madras. We, therefore hereby tender our apology to the government for having published the same.

K. H. Shetty,
Publisher.

ಅಂತರಂಗದ ತಾ. 13-6-44ರ ಸಂಚಿಕೆಯಲ್ಲಿ ಪ್ರಕಟವಾದ 'ಪವಿತ್ರ ಪ್ರಾಯಶ್ಚಿತ್ತ'ವೆಂಬ ಲೇಖನವು ಮದ್ರಾಸ ಸರಕಾರದಿಂದ ಆಕ್ಷೇಪಕರವೆಂದು ಪರಿಗಣಿಸಲ್ಪಟ್ಟಿರುವ ಪ್ರಯುಕ್ತ ನಾವು ಆ ಲೇಖನವನ್ನು ಪ್ರಕಟಿಸಿದ ಬಗ್ಗೆ ತುಂಬಾ ವಿಷಾದಿಸುತ್ತೇವೆ.

K. H. Shetty,
Publisher.

ಗಾಂಧಿ—ಜಿನ್ನಾ ಮಾತುಕತೆ

ಅಪಜಯಗೊಂಡಿತು.

ಇಡೀ ಹಿಂದುಸ್ಥಾನ-ಯಾಕೆ, ಅಖಿಲ ಪ್ರಪಂಚವೇ—ಆತುರದಿಂದ ನಿರೀಕ್ಷಿಸುತಿದ್ದ ಗಾಂಧಿ-ಜಿನ್ನಾ ಸಂಧಾನ ಸಂಭಾಷಣೆಗಳು ಕಟ್ಟಕಡೆಗೆ ನಿರರ್ಥಕವಾದುವೆಂಬ ವಾರ್ತೆ ಬಂದಿದೆ. ಸೆಪ್ಟಂಬರ್ ತಾ 9ರಿಂದ 27ರ ವರೆಗೆ, ಕೆಲವು ವಿಶೇಷ ದಿನಗಳನ್ನು ಬಿಟ್ಟು ಉಳಿದ ಎಲ್ಲಾ ದಿನಗಳಲ್ಲೂ ಬೊಂಬಾಯಿಯ 'ಮೌಂಟ್ ಪ್ಲಿಸೆಂಟ್'ನಲ್ಲಿರುವ ಮಿ. ಜಿನ್ನರ ಬಂಗಲೆಯಲ್ಲಿ ಗಾಂಧಿ ಜಿನ್ನರೊಟ್ಟಾಗಿ ಮಾತುಕತೆ ನಡೆಸಿದ್ದರು. ಆ ಸಂಭಾಷಣೆ ಒಟ್ಟಿಗೆ 26 ಘಂಟೆ ನಡೆದಿದ್ದಿತು. ಕೊನೆಗೆ ತಾ 27ರಲ್ಲಿ ಒಂದೂವರೆ ಘಂಟೆ ಮಾತಾಡಿಕೊಂಡು ಹೊರಬಂದಾಗ ತಮ್ಮ ಅಪಜಯವನ್ನು ಪತ್ರಿಕಾ ಪ್ರತಿನಿಧಿಗಳಿದಿರು ಒಪ್ಪಿಕೊಂಡರು. ಸಂಭಾಷಣೆಯ ಸಾರಗಳನ್ನು ಪತ್ರ ವ್ಯವಹಾರಗಳ ಮೂಲಕ ಗಾಂಧಿ ಜಿನ್ನರು ದಾಖಲೆಮಾಡಿಕೊಂಡಿದ್ದರು. ಅವೆಲ್ಲಾ ಈಗ ಪ್ರಕಟಿಸಲ್ಪಟ್ಟಿವೆ. ಎರಡು ರಾಷ್ಟ್ರ ನಿರ್ಮಾಣಗಳ ರೂಪರೇಷೆ ಮತದಾನ ಪದ್ಧತಿಯಿಂದ ನಿರ್ಧಾರ ಮತ್ತು ಇತರ ವಿಷಯಗಳ ಕುರಿತು ಈ ಇಬ್ಬರು ಪ್ರಮುಖರ ಅಭಿಪ್ರಾಯಗಳು ಒಂದುಗೂಡದುದೇ ಈ ಅಪಜಯಕ್ಕೆ ಕಾರಣವೆಂದು ಪ್ರಕಟಿಸಲ್ಪಟ್ಟಿದೆ. ಇದು ತಮ್ಮ ಕೊನೆಯ ಪ್ರಯತ್ನವೇನೂ ಅಲ್ಲವೆಂದು ಮಿ. ಜಿನ್ನರಂದಿದ್ದಾರೆ. ಗಾಂದಿಜೀ ಈ ಮಾತನ್ನೆತ್ತಿಕೊಂಡು ಇಂದಿನ ಅಪಜಯವು ಮುಂದಿನಮ ಹಾಪ್ರಯತ್ನಕ್ಕೆ ಪ್ರೇರಣೆಯಾಗುವದೆಂದು ಆಶ್ವಾಸನೆ ಕೊಟ್ಟಿದ್ದಾರೆ.

: ತುಂತ್ತುರು :

ಗುಡ್ಡೆ ಮಣ್ಣೆರಿವುದಕ್ಕಿಂತ ಗುಲ್ಲುಗಂಜಿಸ್ತು ಹುಟ್ಟಿಸುವದು ವಾಸಿ; ಖಂಡಿತವಾಗಿ ಕಪಟವಿರುವದಕ್ಕಿಂತ ಕಾಳುತೂಕ ಕಲಿತನವಿರುವದು ವಾಸಿ.

oo oo oo

ಹುಳಿ ಮತ್ತು ಹುಳುಕನ್ನು ಕಂಡರೆ ಬಾಯಿ ನೀರೂರದವರಿಲ್ಲ.

oo oo oo

'ಹಾವಿಗೆ' ಮೆಟ್ಟುವವನಾದರೂ ಹಾವಿಗೆ ತುಳಿಯಬಾರದು; ಭಾಗ್ಯವಂತನಾದರೂ 'ಬಾಲ್ಗಳ'ಗಳನ್ನು ಕೆಣಕಬಾರದು.

oo oo oo

ಘಂಟೆಯ ಸ್ವರ ಸಂಕಕ್ಕಿಲ್ಲ; ಮಂಕನ ತೀವಿ ಮಾನ್ಯಗಿಲ್ಲ.

oo oo oo

ಎದೆಗೊಟ್ಟು ನಿಲ್ಲಲಾಗದಿದ್ದರೆ ಒದೆಕೊಟ್ಟು ನಡೆಯಬೇಕು; ತರ್ಕಕ್ಕೊಗ್ಗದ ಅಹಂಭಾವಿಯನ್ನು ತಾತ್ಸಾರ ಮಾಡಿಬಿಡಬೇಕು.

oo oo oo

ದುಡಿತದ ದುಗ್ಗಾಣಿ ವಚ್ಚವೂ ದುಂದುವೆಚ್ಚ; ಅನುಭವದ ಅಲ್ಪಾಂಶವನ್ನು ಮರೆಕರೂ ಅದು ಆತ್ಮವಂಚನೆ.

oo oo oo

ಮುಗ್ಗೊತ್ತಿ ಹಿಡಿದು ನಿಂತುಕೊಳ್ಳುವ ಬದಲಿಗೆ ಮುಂದೆ ಮುಂದೆ ಹೋಗುವದು ವಾಸಿ; ದೂರ ನಿಲ್ಲುವದಕ್ಕಿಂತ ದೂಡಿ ಹೋಗುವದು ಉತ್ತಮ.

oo oo oo

ಶನಿಹಿಡಿದು ಅಡ್ಡಾಡುವದಕ್ಕಿಂತ ಛಳಿಹಿಡಿದು ನಡುಗುವದು ವಾಸಿ; ಆಗುಹೋಗು ತಿಳಿಯದ ಮೂಳನಾಗಿ ಮೆರೆಯುವದಕ್ಕಿಂತ ಅದಾಯವಿಲ್ಲದ ಕೂಲಿಯಾಗಿರುವದು ವಾಸಿ.

oo oo oo

ಸೆಳೆತದಿದಿರಲ್ಲಿ ಕಾಲು ನಿಲ್ಲುವಂತಿಲ್ಲ; ಸೆಣಸಾಟದಿದಿರಲ್ಲಿ ಕರುಣೆ ನಿಲ್ಲುವಂತಿಲ್ಲ.

oo oo oo

ಆನೆಗೆ ಅಂಬಾರಿ ಹಾಕುವದು ವರುಷಕ್ಕೊಂದೆರಡು ಬಾರಿ; ಆದರೆ ಅಂಕುಶ ಹಾಕುವ ಸಂದರ್ಭ ಹಲವು ಬಾರಿ; ಅತಿಗರ್ವಿಗಳಿಗೆ ಮಾನ್ಯತೆ ಕೊಡುವದು ಎಂದಾದರೊಮ್ಮೆ; ಆದರೆ ಮರ್ದಿಸುವ ಆವಶ್ಯಕತೆ ಹಲವುಸಲ.

Read & Advertise in
NAVAYUGA

ನಿಮ್ಮ ಪ್ರಶ್ನೆಗೆ ನಮ್ಮ ಉತ್ತರ



(ಮೊದಲೇ ತಿಳಿಸಿದ್ದ ಕಾರಣದಿಂದಾಗಿ ಕಳದ ಮೂರು ವಾರಗಳಲ್ಲಿ 'ಅಂತರಂಗ'ದ ಪ್ರಕಟಣೆ ಇರಲಿಲ್ಲ. ಈ ನಡುವಿನ ಅವಧಿಯಲ್ಲಿ ಬಂದಿದ್ದ ವರ್ತಮಾನಗಳಿಗೆ ಸಂಬಂಧಿಸಿದ ಪ್ರಶ್ನೆಗಳಿಗೀಗ ಕಾಲಭಾಧೆ ತಟ್ಟಿದೆ. ಅಂಥವುಗಳನ್ನು ಬಿಟ್ಟು ಮಿಕ್ಕ ಪ್ರಶ್ನೆಗಳನ್ನಷ್ಟೇ ಇಲ್ಲಿ ಉತ್ತರಿಸಲಾಗಿದೆ– ಸಂ.)

ಶ್ರೀಮತಿ, 'ಕುಮುದ'. ಆದೋನಿ.

"ಹಿಂದಿನ ಕವಿಗಳೆಲ್ಲಾ ಹೆಚ್ಚಾಗಿ ಸ್ತ್ರೀಯರ 'ಚಂಚಲಾಕ್ಷಿ' 'ಬಿಡಿಗಣ್ಣೋಟ' 'ಕಮಲನಯನ'ಗಳ ವರ್ಣನೆ ಮಾಡಿರುವದು ಕಂಡು ಬರುತ್ತದೆ. ಪುರುಷರು ಆ ಕಾಲದಲ್ಲಾದರೂ ಕುರುಡರಾಗಿರಲಿಕ್ಕಿಲ್ಲ. ಆದರೂ ಪುರುಷರ ಕಣ್ಣು ಅಥವಾ ನೋಟಗಳ ರಮ್ಯ ವರ್ಣನೆಯೇಕೆ ಕಂಡುಬರುವದಿಲ್ಲ?"

ಹಾಗೆ ವರ್ಣಿಸಿದವರು ಹೆಚ್ಚಾಗಿ ಪುರುಷ ಕವಿಗಳೇ. ಹಾಗೆ ವರ್ಣಿಸಬೇಕಾದರೆ ಪುರುಷರ ನೋಟ ಹೇಗಿರಬೇಕೆಂಬುದು ತಾನಾಗಿ ತಿಳಿಯುವದಿಲ್ಲವೆ?

ಶ್ರೀ. ಸಿ. ಪಿ. ಆರ್, ಹುಬ್ಬಳ್ಳಿ.

"ಈ ಬಾರಿಯ ಯುದ್ಧದಲ್ಲಿ ಸೇರಿ ಅಡನ್ನೊಂದು ಉದ್ಯೋಗವಾಗಿ ಮಾಡಿಕೊಂಡು ಕುಟುಂಬ ಪೋಷಣೆ ಮಾಡುತ್ತಿರುವ ವರುಷ ಜನಸಂಖ್ಯೆಯ ಗಣನೀಯ ಭಾಗವಾಗುವಷ್ಟಿದ್ದಾರೆ. ಆದ್ದರಿಂದಲೇ ಯುದ್ಧಾರಂಭದ ವೊದಲಿದ್ದ ನಿರುದ್ಯೋಗ ಸಮಸ್ಯೆಯೀಗ ಸಂಪೂರ್ಣ ನಿವಾರಣೆಗೊಂಡಿದೆ. ಸದ್ಯದಲ್ಲೇ ಯುದ್ಧ ಮುಗಿಯುವ ಸಂಭವವು ಕಾಣುತ್ತಿರುವಾಗ ಇನ್ನೊಮ್ಮೆ ನಿರುದ್ಯೋಗ ಭೂತವು ಭಯಂಕರಾಕಾರದಿಂದ ತಲೆಯೆತ್ತುವ ಅಪಾಯವಿಲ್ಲವೆ?"

ನಿಧಾನಿಸಿರಿ. ಭಾರತೀಯರಿಗೆ ಹನುಮನ ಆಯುಷ್ಯವೇನೂ ಇಲ್ಲ. ಯುದ್ಧ ಮುಗಿಯಲಿಕ್ಕೂ ಸಮಯವಿದೆ. ಆ ಅವಧಿಯೊಳಗೇನೇ ಮುಗಿದು ಹೋಗುವವರು ಹಲವರಿರಬಹುದು. ಆ ಮೇಲಾದರೂ ಯುದ್ಧಾನಂತರದ ಪುನರ್ನಿರ್ಮಾಣದ ಹೊಸ ಉದ್ಯೋಗವೊಂದಿದೆ. ಇವೆಲ್ಲವುಗಳ ಮೇಲಿಂದ ನೀವು ಊಹಿಸಿರುವ ಅಪಾಯ ಅಷ್ಟೊಂದು ಭೀಕರವಾಗಲಿಕ್ಕಿಲ್ಲ.

ಶ್ರೀ. ಕೆ. ಎಸ್. ಎನ. ಗದಗ.

"ಕಳದ ಎಪ್ರಿಲ್ ತಿಂಗಳಲ್ಲಿ ಬೊಂಬಾಯಿ ಬಂದರದಲ್ಲಾಗಿದ್ದ ಅಗ್ನಿ ಅನಾಹುತದ ಕಾರಣಗಳನ್ನು ವಿಚಾರಿಸಲು ಸರಕಾರದಿಂದಲೇ ನಿಯಮಿಸಲ್ಪಟ್ಟಿದ್ದ ವಿಚಾರಣ ಸಮಿತಿಯು ವರದಿಯನ್ನೊಪ್ಪಿದಾಗ ನನ್ನ ಕೈಯಲ್ಲಿದ್ದ ಸಿಗರೇಟೂ ಜಾರಿಬಿದ್ದಿತು. ಯಾರೋ ಪ್ರಮಾದದಿಂದ ಸೇದಿ ಬಿಸುಟ ಸಿಗರೇಟ್ ಬೆಂಕೆಯೇ ಅಂತಹ ಪ್ರಳಯಕ್ಕೆ ಮೂಲವೆಂಬುದನ್ನು ಓದಿದವರು ಆ ದೃಶ್ಯವನ್ನು ಜ್ಞಾಪಿಸಿಕೊಂಡಾದರೂ ಹೊಗೆ ಬತ್ತಿಗಳನ್ನು ನಿಷೇಧಿಸುವರೆ?"

ಹೋ! ನಿಮ್ಮ ಕೈಯಿಂದ ಜಾರಿಬಿದ್ದ ಆ ಸಿಗರೇಟ್ ತುಂಡನ್ನು ಮತ್ತೊಮ್ಮೆ ನೋಡಿ ಕೊಂಡಿರಾ ಹೇಗೆ? ಹಾಗೆಯೇ ಏನೋ ಗಡಿಬಿಡಿಯಿಂದ ಯಾರೋ ಮಾಡಿರುವ ಪ್ರಮಾದವಿದು. ಆದಕ್ಕಾಗಿ ಹೊಗೆಬತ್ತಿಗಿಂತಲೂ ಮೊದಲು ಗಡಿಗಡಿ ತ್ಯಾಗವೇ ಅವಶ್ಯವಲ್ಲವೆ?

ಶ್ರೀ. ಎಸ್ ಎ.ಎಸ್, ಅಂಕೋಲ.

"ಇಂಗ್ಲಾಂಡಿನ ಚರ್ಚಿಲ್, ಅಮೇರಿಕದ ರುಸವೆಲ್ಟ್, ರಷ್ಯದ ಸ್ಟಾಲಿನ್, ಜರ್ಮನಿಯ ಹಿಟ್ಲರ್, ಜಾಪಾನಿನ ಕ್ಯಾಸೋ, ಚೀನದ ಚೀಯಾಂಗ್ ಒಂದೆಡೆಯಲ್ಲಿ ಕಲೆತರೆಂಬ ವಾರ್ತೆಯನ್ನು ನಾವೆಂದಾದರೂ ಓದುವ ಸಂಭವವಿದೆಯೆ?"

ಇಲ್ಲವೇ ಇಲ್ಲ. ಕೆಲವರೂಹೆಯಂತ 'ಪರಲೋಕ'ವಿರುವದು ನಿಜವಾಗಿದ್ದರೆ ಅಲ್ಲಿ ಇವರೆಲ್ಲಾ ಒಂದೆಡೆ ಸೇರುವದು ಖಂಡಿತವಾದರೂ ಅಲ್ಲಿಯ ವಾರ್ತಾಪತ್ರಿಕೆಗಳು ಇಲ್ಲಿಗೆ ಬರುವದು ಅಸಂಭವ!

ಶ್ರೀ ಕೆ. ಬಿ. ಬೆಂಗಳೂರು.

"ಇಟಲಿ ವರೆಗೆ ಬಂದಿದ್ದ ಭ್ರಾಂತ ಕಾರ್ಯದರ್ಶಿ ಮಿ. ಅಮೆರಿಯವರು ಹಾಗೇನೇ ಹಿಂದುಸ್ಥಾನದ ವರೆಗೂ ಬಂದು ಹೋಗಬಾರದಿತ್ತೆ?"

ಅವರು ಇಟಲಿಗೆ ಹೋದುದು ಅನ್ಯರೊಡನೆ ಹೋರಾಡುವ ಯೋಧರನ್ನು ನೋಡುವದಕ್ಕಾಗಿ- ತನ್ನ ಇದಿರಿಗಿಳಿಯೋಧರನ್ನು ಅಥವಾ ಯೋಗಿಗಳನ್ನು ನೋಡಬೇಕೆಂದಿದ್ದರೆ ಖಂಡಿತವಾಗಿಯೂ ಹಿಂದುಸ್ಥಾನಕ್ಕೆ ಬರುತ್ತಿದ್ದರು.

ಶ್ರೀ ರಾಮಕೃಷ್ಣ ಥಿಯೇಟರ್ ಲಿಮಿಟೆಡ್, ಉಡ್ಪಿ.

ರಣಜಿತ್ ರವರ ಸಂಗೀತ ಚಿತ್ರ

ಭೇಟಿ

ಖುರ್ಶಿದ್, ವಾಸಂತಿ, ಅರುಣ ಕುಮಾರ್

ನಟಿಸಿರುವರು.

ತಾ. 20—10—44ರಿಂದ

ಕನ್ನಡ "ವಾಣಿ"

ಸಾಹಿತ್ಯದ ಗೋ

ಶ್ರೀ. ಶಿವರಾ

ಯೇಹಲಿ ನನ್ನೂರು. ಮೃತ ರಾಜಧಾನಿಗಳ ತವರೂರಾದ ಅಲ್ಲಿಂದ ನಾನು ವಾಸ್ತುಶಿಲ್ಪ ಕುತೂಹಲಿಯಾಗಿ ಆಗ್ರಾ ನೋಡಲು ಹೋಗಿದ್ದೆ-ಅದೂ ಒಂದು ಮೃತ ರಾಜಧಾನಿಯಲ್ಲವೇ ಎಂದು. ಅಲ್ಲಿ ನನಗೊಬ್ಬ ಬಂಗಾಲಿ ಮಿತ್ರನ ಪರಿಚಯವಾಯಿತು. ನಾನವನ ಊಡುಗೆಯಿಂದ ಬಂಗಾಲಿಯೆಂದು ತಿಳಿದಿದ್ದೆ. ನಾವಿಬ್ಬರು 'ತಾಜಮಹಲಿನ' ಗೋರಿಯ ಮುಂಗಡೆಯಲ್ಲಿ ಭೇಟಿಯಾದೆವು. ಪ್ರವಾಸಿಗರ ಸ್ನೇಹ ಬೆಳೆಯಲೂ ಸಮಯ ಬೇಕಿಲ್ಲ, ಮರೆಯಲೂ ಸಮಯ ಬೇಕಿಲ್ಲ. ಅಂತೇ ಒಂದೇ ದಿನದ ಆಪ್ತ ಮಿತ್ರತ್ವದಿಂದ ಜತೆಗಾರರಾಗಿ, ಆ ರಾತ್ರಿಯ ಪಯಣವನ್ನು ಜತೆಗೇನೆ ಮಾಡಿದೆವು. ಆ ಗೆಳೆಯನ ಊರು ಕಲಿಕತ್ತೆ-ಹೆಸರು ಪ್ರಸನ್ನಗೌಡ. ಅವನು ಗೌಡ ಬಂಗಾಲದವನಾದುದರಿಂದ ಆ ಹೆಸರರಿಸಿಕೊಂಡನೆಂದು ನನ್ನ ತಿಳಿವು. ಮುಖ್ಯ ವಿಷಯ ಅದಲ್ಲ-ನಮ್ಮ ರೈಲಿನ ಪಯಣಕಾಲದಲ್ಲಿ ಆತ ಕನ್ನಡಿಗನೆಂದು ನನಗೆ ತಿಳಿಯಿತು. ಗೌಡ-ಕನ್ನಡನಾಡಿನ ಒಂದು ಕಾಲದ ಮೊದಲು ಹೆಸರಂತೆ. ಅವರು ತನ್ನವರ ನಾಡಿನ ವಿಷಯವಾಗಿ ಬಹಳವಾಗಿ ಹೇಳಿಕೊಂಡುದರಿಂದ ನನ್ನ ಕುತೂಹಲಹೆಚ್ಚಿತು. "ಅಂದರೆ, ನೀವೇ ಕನ್ನಡ ಮಾತಾಡಬಲ್ಲಿರಾ? ಆ ಮಾತು ಹೇಗಿದೆಯೆಂದು ಕೇಳಬಹುದಿತ್ತಲ್ಲ" ಎಂದೆ.

"ನನಗೇನೇ ಕನ್ನಡ ಬರುವುದಿಲ್ಲ; ನನ್ನವರು ಕನ್ನಡಿಗರು. ನಮ್ಮ ಕನ್ನಡ ಬಲು ದೊಡ್ಡದು" ಎಂದ.

'ಹಾಗಾದರೆ ಕಲ್ಕತ್ತೆಯು ನಿಮ್ಮ ಊರಾದುದು ಹೇಗೆ?'

'ಅದೇ ನನ್ನ ಹಿರಿಯರು ಇಲ್ಲಿ ಉದ್ಯೋಗಕ್ಕಾಗಿ ಬಂದು ನೆಲೆಸಿದರು; ನಾವು ಬಂಗಾಲಿಗಳ ಎಡೆಯಲ್ಲಿ ಜೆಳೆದೆವು. ಬಂಗಾಲ ಮನೆ ಮಾತಾಯಿತು. ಆದರೂ ನಾವು ಹೆಣ್ಣು ಗಂಡು ತರಲು ಮುಂಬಯಿಗೆ ಹೋಗುತ್ತೇವೆ. ನಮ್ಮವರು ಅಲ್ಲಿ ತುಂಬಾ ಇದ್ದಾರೆ"

"ಅಲ್ಲಿ ಅವರು ಕನ್ನಡ ಮಾತಾಡುತ್ತಾರೆಯೇ?

"ಏನೋ-ಅವರು ಮುಂಬಯಿಗೆ ಬಂದು ನೆಲಸಿ ಶತಮಾನಗಳಾಗಿರಬೇಕು. ಆದರೆ ಅವರು ಕೆಲವು ಬಾರಿ ಹೆಣ್ಣು ಗಂಡಿಗಾಗಿ ಕನ್ನಡ ದೇಶಕ್ಕೆ ಹೋಗುತ್ತಾರೆ" ಅಂದ.

ಅಷ್ಟಕ್ಕೆ ಆತ ಸುಮ್ಮನಿರದೆ ತಾನು ಆ ದೇಶ ನೋಡಿಲ್ಲವಾದರೂ, ಅದು ಬಲು ಹೆಸರಾದುದೆಂದೂ ಬಲು ದೊಡ್ಡ ಗುಂಬಜಗಳು ಅಲ್ಲಿವೆಯೆಂದೂ ಅಂದ. ತಿರುಗಿ ಅವನೊಡನೆ "ಅದೆಂಥ ರಾಜ್ಯವಯ್ಯ, ನಾನು ಕೇಳದ ರಾಜ್ಯ"-ಎಂದೆ. ಆತ ಅಭಿಮಾನದಿಂದ "ಒಂದು ಕಾಲದಲ್ಲಿ, ಯಾವುದೋ ತುಂಗನ ಕಾಲವಂತೆ, ಆಗ ಕನ್ನಡ ಕಾವೇರಿಯಿಂದ ಗೋದಾವರಿಯ ತನಕ ವ್ಯಾಪಿಸಿತ್ತು" ಎಂದ.

"ಹೌದೇ?" ಎಂದು ಕೇಳಿದೆ.

"ಅದಕ್ಕೂ ಪೂರ್ವದಲ್ಲಿ—ಸಿಂಧು ನದಿಯ ತನಕವೂ ಅವರಿದ್ದರು"-ಎಂದ

"ಈಗ" ಎಂದು ಕೇಳಿದೆ.

ಈಗಲೇ ನಾನು ನೋಡಿಲ್ಲ. ತುಂಗಭದ್ರೆಯೆಂದೊಂದು ನದಿಯಿದೆಯಲ್ಲಿ. ಅದರ ದಂಡೆಯ ಮೇಲೆ 'ಕರ್ನನಗರ' ಎಂದೊಂದು ಬರಿಯ ಪಟ್ಟಣವಾಗಿ ಉಳಿದಿದೆ" ಎಂದನು.

"ಅಲ್ಲೇನು ವಿಶೇಷ?"

"ಅಲ್ಲೇ ಎಲ್ಲ ವಿಶೇಷವಿರುವುದು. ನಾನು ಹೇಳಿದ ಗುಮ್ಮಟ ಅಲ್ಲಿರುವುದು"—ಎಂದ.

"ಗೋಲು ಗುಮ್ಮಟವಿರುವುದು ಬಿಜಾಪುರದಲ್ಲಲ್ಲವೇ? ಅದು—ದಕ್ಷಿಣ ಮರಾಟರಾಜ್ಯವಲ್ಲವೇ"—ಎಂದು ಕೇಳಿದೆ!

"ಇಲ್ಲಿಲ್ಲ-ಅದಲ್ಲ ಇದು. ಇದು ಇನ್ನೂ ಭವ್ಯ ಗುಮ್ಮಟ—'ಗೋಳು ಗುಮ್ಮಟ'! ಸಾಹಿತ್ಯದ ಗೋಳು ಗುಮ್ಮಟ-ಎಂದು ಬಲು ವಿಖ್ಯಾತವಾಗಿದೆ"-ಎಂದರು. ಮುಂದೆ ಹೌರಾ ನಿಲ್ದಾಣ ಬಂದಿತು. ಅವರು ಅದೃಶ್ಯರಾದರು. ನಾನು ಆ ಮೃತ ರಾಜಧಾನಿಯನ್ನು ನೋಡಿಕೊಂಡು ಊರಿಗೆ ಮರಳಿದೆ.

ಬಹಳ ಸಮಯದ ಬಳಿಕವೇ, ದಕ್ಷಿಣದೇಶಕ್ಕೆ ನನಗೆ ದಿಲ್ಲಿಯಿಂದ ಹೋಗಲು ಅನುಕೂಲವಾಯಿತು. ನನ್ನ ಈ ಬಾರಿಯ ಯಾತ್ರೆಯಲ್ಲಿ-ಬಿಜಾಪುರ, ಕರ್ನನಗರಗಳನ್ನು ಸೇರಿಸಿಕೊಂಡೆ. ಎರಡೂ ರಾಜಧಾನಿಗಳು, ಒಂದು ಹಿಂದಿನದು, ಒಂದು ಈಗಿನದು-ಎಂದು. ನಾನು ಚರಿತ್ರೆಯಲ್ಲಿ ಬಿಜಾಪುರವು ಕನ್ನಡ ರಾಜ್ಯವಾಗಿತ್ತು ಒಂದು ಕಾಲದಲ್ಲಿ—ಎಂದು ಕೇಳಿದ್ದೆ. ಅಲ್ಲವೆ ನಾನು ಕೇಳಿದುದರ ಮೇಲಿಂದ ಕನ್ನಡನುಡಿ ಗೀತವಂತೆ; ಸುಲಿದ ಬಾಳೆಯ ಹಣ್ಣಿಂತೆ, ಪಾಕವಿರಿಸಿದ ರಸ ಗೂಲಾವಂತೆ-ಎಂದು ಬಣ್ಣಿಸಿದ್ದರು. ಹಾಗಿರಲು ಅದೆಂಥ ಸಂಗೀತದ ಭಾಷೆಯಪ್ಪ ಎಂದು ನಾನು ತಿಳಿಯಲು ಕುತೂಹಲ ಪಡುತ್ತಿದ್ದೆ. ಈ ಬಾರಿ ಹೋಗಿಯೇಬಿಟ್ಟೆ.

ರೈಲ್ವೆ ನಿಲ್ದಾಣ ಇಳಿದೊಡನೆಯೇ ನನಗೆ ಬಿಜಾಪುರದ ದರ್ಶನವಾಯಿತು. ಗೋಲುಗುಮ್ಮಟ ಕಂಡು ಹಿಗ್ಗಿದೆ! ಅದನ್ನು ಸಾಯುವ ಮೊದಲೇ ಗೋರಿಯಾಗಲು ನಿರ್ಮಿಸಿದ ದೊರೆಯ ಮುಂದಾಲೋಚನೆಯನ್ನು ಕೊಂಡಾಡಿದೆ! ಮೇಲೆ ಅದರ ನಿರ್ಮಾಣಕ್ಕೆ ಬೇರೊಂದು ಕನ್ನಡ ರಾಜ್ಯದ ಬೊಕ್ಕಸ ಬರಿದಾಯಿತೆಂದು ಕೇಳಿ ಚಕಿತನಾದೆ. ಈ ಕನ್ನಡಿಗರು ಶ್ರೀಮಂತರು. ಈ ಒಂದು ಗುಮ್ಮಟವೇ ಹೀಗಿರಲು, ಇಷ್ಟು ಹಿರಿದಾಗಿರಲು, ನನ್ನ ಗೆಳೆಯ

ನೆಂದ ಆ ಗುಮ್ಮ
ಎನಿಸಿತು ನನಗೆ.
ಡನುಡಿ ಗೀತ ಕೇ
ಯಲಿಲ್ಲ. ಒಂದು
ರಾಜಧಾನಿಯಾಗಿ
ಡ ಮಾತಾಡುವ
ಪ್ರಾಂತಭಾಷೆ—
ಹಿಂದೂಸ್ತಾನಿ—
ತೀರ ಒಬ್ಬ ಹ
"ಇಲ್ಲಿ ಕನ್ನಡ ವ
ಎಂದು. ಅವನು
ಲವು ಗೌಳಿಗರ
ವರೂ ಮರಾಟ
ರಲ್ಲಾ —ಎಂದೆ.
ಥಾಂಬ"ಎಂದ.
ಉಪಾಯಗಾಣದ
ಳಿಗಿತ್ತಿ ಹಾಲು
ಅವಳ ಎಮ್ಮೆ ತು
ತು; ಲತ್ತೆಕೊಟ್ಟ
ನೋ ಅಷ್ಟಳು.
ಳಿಸಿತು. ಆದರೆ
ದ ಎಮ್ಮೆ ಸ್ವಲ್ಪ
ತು! 'ಅದು ಕ
ಕೇವಲ ಎಮ್ಮೆಗ
ರು ಆಡುತ್ತಾರೆ'-
"ಎಮ್ಮೆಗಳಿಗ
ಯುತ್ತದೆಯೇ?"
"ಎಮ್ಮೆಗಳ
ರು. ಅಲ್ಲಿ ಒಂದು
ಳೂ ಕನ್ನಡದಲ್ಲಿ
ತೆ. ಈಗ ಅವಕ್ಕೆ
ದರೂ ಕನ್ನಡ ನ
ಶಕ್ತಿಯಿದೆ"—ಎ
ಗೆ ಕನ್ನಡ ರಾಜ್ಯ

ಳು ಗುಮ್ಮಟದಲ್ಲಿ

ಮಂ ಕಾರಂತರು.

ಟ ಎಂತಿರಬೇಡ—
ಆದರೆ ನನಗೆ "ಕನ್ನ
ಡವ" ಲಭ್ಯ ದೊರೆ
ಕಾಲದಲ್ಲಿ ಕನ್ನಡದ
ನ್ನಡ ಆ ಊರಲ್ಲಿ ಕನ್ನ
ರೂ ಇರಬೇಡವೆ!
ರಾಷ್ಟ್ರಭಾಷೆ
ಇವುಗಳೇ! ಕೊನೆಗೆ
ಜನನ್ನು ಕೇಳಿದೆ!
ತಾಡುವವರಿಲ್ಲವೇ"
ನ್ನನ್ನ ಊರಿನ ಕೆ
ನೆಗೊಯ್ದನು ಆ
ಮಾತನಾಡುತ್ತಿರುವ
ಅವನು "ಥಾಂಬ್,
ಜನು ತಾಂಬಿದೆ—
ಅಷ್ಟಕ್ಕೆ ಒಬ್ಬ ಗೌ
ಂಡಲು ಹೋದಳು.
ಬ ಕಾಲು ಸಿಡಿಯಿ
ು. ಗೌಳಗಿತ್ತಿ ಏನೇ
ಯ್ಯಳ್ತೆ ನನಗೆ ಕ
ಾದರ ಪರಿಣಾಮದಿಂ
ಾಗಿ ಹಾಳು ಇಳುಗಿ
ಡ! ಇಲ್ಲಿ ಅದನ್ನು
ೂಡನೆ ಮಾತ್ರ ಜನ
ಎಂದ.
ಆ ಮಾತು ತಿಳಿ

ಟ್ಟೂರು ಮಹಿಷೂ
ಕಾಲದಲ್ಲಿ ಎಮ್ಮೆಗ
ಮಾತಾಡುತಿದ್ದುವಂ
ಆಡುವ ಶಕ್ತಿ ಹೋ
ಡಿ ಕೇಳಿ ತಿಳಿಯುವ
ದನು. ಆಲ್ಲಿಂದ ನನ
ಕನ್ನಡ ನುಡಿಯ

ಮೇಲೆ ಅಭಿಮಾನ ಉಕ್ಕಿತು. ನೇರಾಗಿ ಆ ರಾತ್ರಿಯೇ, ಆ ದಿನದ ಹರಿಕೇನ್ ಮೇಯಿಲ್‌ನಲ್ಲಿ ಕುಳಿತೆ. ಬೆಳಗಾಗುವಾಗ ನಾನು ಇಳಿದುದೇ ತುಂಗಭದ್ರ, ದಂಡೆಯ ಮೇಲಿನ ರಾಜಧಾನಿ ಕರ್ನನಗರದಲ್ಲಿ. ದಾರಿಯಲ್ಲಿ ಒಬ್ಬ, ನನಗೆ, ಕರ್ಣಾಟಕದ ಹಿಂದಿನ ರೈಲುಗಳ ಕತೆ ಹೇಳಿದನು. "ನೋಡಿ, ಈಗ ನವ್ಯ ಮೈಯಿಲಿಗೆ ಬಿಜಾಪುರದಿಂದ ಕರ್ನನಗರಕ್ಕೆ ಬರಿಯ ಆರು ತಾಸು ಸಾಕು ಹಿಂದೆ ಇದೇ ದೂರ ಬರಲು ಒಂದು ದಿನ ಹಿಡಿಯುತ್ತಿತ್ತಂತೆ!"-ಎಂದನು.

'ಅದೇನಪ್ಪ?'

"ಆಗ ರೈಲು ಬಹುಭಾಗ ಕನ್ನಡರಾಜ್ಯದಲ್ಲೇ ಹಾಯುತ್ತಿತ್ತು, ಕನ್ನಡಿಗರಿಗೆ ಅವಸರವೇ ಆಗಲಾರದು. ರೈಲು ಸಹ ಈ ರಾಜ್ಯದಲ್ಲಿ ತಾಸಿಗೆ ೪ ಮೈಲಿಗಿಂತ ವೇಗವಾಗಿ ಸಂಚಾರ ಮಾಡ ಕೂಡದೆಂಬ ನಿಯಮವಿತ್ತಂತೆ. ವೇಗದಿಂದ ಆಯುಷ್ಯ ಕಡಿಮೆಯಾಗುವ ತತ್ವ ಕಂಡು ಹಿಡಿದವರು-ಮೊದಲಿಗೆ ಕನ್ನಡಿಗರು"-ಎಂದ.

"ಹಾಗಾದರೆ-ಕರ್ನನಗರದ ಕನ್ನಡಿಗರು ತುಂಬಾ ದೀರ್ಘಾಯುಗಳಿರಬೇಕಲ್ಲವೆ!" "ಛೇ--ಅವರಲ್ಲಿ ಸಾವನ್ನೇ ಗುರುತಿಸುವುದೂ ಕಷ್ಟ. ಬದುಕಿದವರಾರು ಸತ್ತವರಾರು-ಎಂದು ತಿಳಿಯಲಾರದಷ್ಟು ದೀರ್ಘಾಯುಗಳು, ಅದೇ ರೀತಿಯ ಗತಿ, ಅದೇ ರೀತಿಯ ಮತಿ"

ಇದನ್ನೆಲ್ಲ ಕೇಳಿ ನನಗೆ-ನಗರ ನೋಡುವ ಕುತೂಹಲ ಉಕ್ಕಿತು. ಕಸ್ಟಂ ಅಧಿಕಾರಿಗಳಿಗೆ, ತಿರುಗಿ ಬರುವೆನೆಂದು ಹೇಳಿ, ನನ್ನ ಸಾಮಾನನ್ನು ಸ್ಟೇಷನ್ನಿನಲ್ಲಿಯೇ ಬಿಟ್ಟು ಹೊರಟೆ. ಅದೊಂದು ಐತಿಹಾಸಿಕ ಯಾತ್ರಾಸ್ಥಳವಾಗಿದ್ದುದರಿಂದ, ಪ್ರವಾಸಿಗಳಿಗೆ ನಗರದರ್ಶನಮಾಡಿಸಲು, ಪಂಡರು ಕಾದಿದ್ದರು. ಇಲ್ಲಿನ ಕನ್ನಡ ಪಂಡರನ್ನು 'ಕಂಪಂಡ'ರೆನ್ನುತ್ತಾರೆ! ನನಗೂ ಒಬ್ಬ ಅಂಟಿದ. ೧೦೦ನಾಣ್ಯದ ಕರಾರಿನಿಂದ ಅವನು ನನಗೆ ತುಂಗಭದ್ರಾ ಸ್ನಾನ ಮಾಡಿಸುವುದಕ್ಕೂ ನಗರದ ಮುಖ್ಯ ಮಂದಿರವಾದ ಸಾಹಿತ್ಯದ ಗೋಳುಗುಮ್ಮಟವನ್ನು ತೋರಿಸುವುದಕ್ಕೂ ಒಪ್ಪಂಬಟ್ಟನು. ಅಂಥ ದೊಡ್ಡ ಸ್ಮಾರಕ ದರ್ಶನವು ಅಷ್ಟು ಸುಲಭದಲ್ಲಾದೀತೆಂದು ನಾನು ತಿಳಿದಿರಲಿಲ್ಲ. ನಿಜ. 'ಕರ್ನನಗರದವರು ದಾನಶೂರರು; ಮೈಮೇಲೆ ಬಿದ್ದ ಕಾಸನ್ನೇ ಅವರು ಹೆಕ್ಕಿದವರಲ್ಲ."

ಮೊದಲು ಆತ ನನಗೆ ಒಂದು ತಾಸಿನ ಕನ್ನಡ ನಡಿಗೆಯಿಂದ, ಕನ್ನಡ ರಾಜಧಾನಿಯಾದ ಕರ್ನನಗರಕ್ಕೆ ಪ್ರದಕ್ಷಿಣೆ ಬರುವಂತೆ ಮಾಡಿದ. ಅದೇ ರಾಜಧಾನಿಯೂ ರಾಜ್ಯವೂ-ಸೇರಿಕೊಂಡಿದೆಯೆಂದೂ ಅಂದನು. ಇಷ್ಟು "ಚಿಕ್ಕ ಊರೇ" ಎಂದು ಕೇಳಿದೆ ನಾನು. ನನ್ನ ಅಜ್ಞಾನವನ್ನು ಕಂಡು ಅವನು ನಕ್ಕು-"ಇದು ಕನ್ನಡವ ಆತ್ಮ-ಇಲ್ಲಿ ಕಾಣುವಷ್ಟು ವಿಶ್ವವ್ಯಾಪಿಯಾದ ಸತ್ವ-ಇವು ನೆಲದೊಳಗಿರುವಷ್ಟೆ ಅಂತರಿಕ್ಷದಲ್ಲಿದೆ-ಎಂದ. ಅವನ ಕಣ್ಣಿಗೆ ಕನ್ನಡ ಜನರ ಹಿನ್ನಡೆ. ಮುನ್ನಡೆಗಳು-ನಾಲ್ಕು ದಿಕ್ಕಿನಲ್ಲೂ ಕಾಣಿಸುತ್ತಲೇ ಇದೆಯಂತೆ. "ಇದನ್ನು ನೋಡಲು ಒಂದು ಒಳಗಣ್ಣು ಬೇಕು, ಒಂದು ಸಂಸ್ಕಾರಬೇಕು—ಬರಿದೆ ತಿಳಿವಂತಿಲ್ಲ!" ಎಂದ.

ಇಷ್ಟು ತಾಸಿನ ಅವಧಿಯಲ್ಲಿ ಅವನು ನನ್ನನ್ನು ಕನ್ನಡ ಸಂಸ್ಕಾರಯುತನಾಗಿ ಮಾಡಲು ತುಂಬ ಪ್ರಯತ್ನ ಪಟ್ಟನು. ರೈಲು ಇಳಿದಲ್ಲಿಂದ ತಿರುಗಿ ನಾನು ಬಂಡಿಯೇರುವ ತನಕ ಸಿರಿಗನ್ನಡಂ ಗೆಲ್ಗೆ'—ಎಂದು ನುಡಿಯಿಸುತ್ತಲೇ ಇದ್ದ. ಅದು ಕನ್ನಡ ಗಾಯತ್ರಿಯಂತೆ ಕೆಲಸಮಾಡಿ, ನಮಗೆ ಕನ್ನಡದ ಬಾಹ್ಯ, ಆಂತರ್, ಭಾವಿ ಜೀವನಗಳನ್ನು ಕಾಣಲು ಶಕ್ತಿ ಹುಟ್ಟಿಸುವುದಂತೆ!

ನಗರ ಸುತ್ತಿ ಬಂದಿಳಿದೆವು—ತುಂಗಭದ್ರೆಯ ನದಿ ದಂಡೆಗೆ. ನನ್ನನ್ನು ಕರೆದು ತಂದ ಪಂಡನೆಂದ "ಇದು ಈಗ ಕಪಡಿದ ನೀರಂತಿದೆ-ಮೂದರೂ ಹಿಂದೆ, ಹರಿಯರ ಕಾಲದಲ್ಲಿ,ಶಾಯಿಯಾಗಿತ್ತು. ಶೃಂಗೇರಿಯಲ್ಲಿನ ಶಾರದಾಂಬೆಯು ತಾನೇ ಶಾಯಿಯಾಗಿ ಹರಿದಳು. ಕನ್ನಡಿಗರು ಇದರಲ್ಲಿ ಲೇಖನಿಯದ್ದಿ ಸಾಹಿತ್ಯ ನಿರ್ಮಾಣಮಾಡಿದರು. ಈ ಶಾಯಿ-ನದಿ ಕನ್ನಡ ಬರವಣಿಗೆಗಾರರ ಬಾಹುಳ್ಯದಿಂದ, ಮುಂದಣ ತೆಲಿಂಗಾಣಕ್ಕೆ ಹೋಗುವಾಗ—ಬರಿಯ ಮರಳು ದಂಡೆಯಾಗಿತ್ತು." ಎಂದ.

"ಈಗೇನು ಹೀಗೆ?"

"ಅದೇ—ಕನ್ನಡ ಸಾಹಿತ್ಯದ ಸಿರಿಯನ್ನು ಕಂಡು ಹಲವು ತೆಲುಗರು, ತಮಿಳರು, ಮರಾಟರು ಕದಿಯಲು ಬಂದರು. ಯಾವ ಗಳಿಗೆಯಲ್ಲಿ ಇಲ್ಲಿ ಶಾಯಿ ಚಾರ್ಯವಾಯಿತೋ—ಆಗಲೇ ಆ ಶಾಯಿ ಆರಿತು. ನದಿ ಬರಿಯ ನೀರಾಯಿತು.ಕಳ್ಳರಿಗೆ ಸೋಲಾಯಿತು ಸಾಹಿತ್ಯ ಎಂಬ ಮೂಲ ಪದವು ಕನ್ನಡದ 'ಶಾಯಿತ್ವ'ದಿಂದ ಹುಟ್ಟಿತು—ಎಂದು ನನಗೆ ತಿಳಿಸಿದನು. ತುಂಗಭದ್ರೆಯನ್ನು ಬರವಣಿಗೆಯಿಂದ ಬತ್ತಿಸಿದ ಕನ್ನಡ ಕಡುಗಲಿಗಳ ನೆನೆವರಿಕೆಯಿಂದ ನಾನು ತಬ್ಬಿಬ್ಬಾದೆ. ನನ್ನ ಸ್ನಾನ ಈ ಸ್ಥಿತಿಯಲ್ಲಿ ನಡೆದುದರಿಂದ, ನನಗೆ, ಸ್ನಾನದಿಂದ ನನ್ನ ಅಂವೆಗೆ ಬಂದ ಬಣ್ಣದ ಪರವೆಯೂ ಆಗಲಿಲ್ಲ!

(ಮುಂದುವರಿಯುವುದು.)

CHAMPAE'S
Snow & Castrex
Sole Distributers for (India.)
Sukhananda Stores
Santhekatte, UDIPI, S. K.

ವಿಡಂಬನಾತ್ಮಕ ಲೇಖ.

ಬೀಡಿ ಸೇದುವ ಸಂಸ್ಕೃತಿಯು

ಲೇಖಕರು:
ಶ್ರೀ. ಹಣಮಂತರಾವ ಕೌಜಲಗಿ.

ಸಣ್ಣ ಮಕ್ಕಳು ಬೀಡಿ ಸೇದಬಾರದು. ಬೀಡಿ ಸೇದುವದೊಂದು ವ್ಯಸನವು. ಇಂಥ ವ್ಯಸನಕ್ಕೆ ಬಲಿಬಿದ್ದು ತಮ್ಮ ಶೀಲ ಕೆಡಿಸಿಕೊಳ್ಳಬಾರದು ಮುಂತಾದ ವ್ಯಾಖ್ಯಾನಗಳನ್ನು ನಾನು ಬಹಳ ಜನರ ಬಾಯಿಯಿಂದ ಕೇಳಿದ್ದೇನೆ. ನನ್ನ ಮತವಾದರೂ ಹಾಗೆ ಇದ್ದುದರಿಂದ ಈ ಉಪದೇಶಾಮೃತದಿಂದ ನನಗೆ ಸಿಟ್ಟು ಬರಲಿಲ್ಲ. ಆದರೆ ನನ್ನ ಕಾರ್ಯ ಬಾಹುಲ್ಯದ ಮೂಲಕ ನಾನು ನಾಲ್ಕು ಜನರಲ್ಲಿ ಅಡ್ಡಾಡಹತ್ತಿದ ಮೇಲೆ ಸಾವಕಾಶವಾಗಿ ನನ್ನ ಭ್ರಮವು ದುರಾಗ್ರಹಕ್ಕೆ ಹತ್ತಿತು. ನುತ್ತು ಬೀಡಿ ಸೇದುವದರಿಂದಾಗುವ ಅನೇಕ ಲಾಭಗಳು ನನಗೆ ಕ್ರಮವಾಗಿ ತಿಳಿಯಹತ್ತಿದವು. ಇಷ್ಟೇ ಅಲ್ಲ, ಬೀಡಿ ಸೇದುವಂಥ ಸಣ್ಣಪುಟ್ಟ ವ್ಯಸನಗಳನ್ನು ಸಮಾಜದಲ್ಲಿ ರೂಢಿಮಾಡಿದ ಮಹಾತ್ಮರು ಒಂದು ಬಗೆಯ ಸಂಸ್ಕೃತಿಯನ್ನೇ ನಿರ್ಮಿಸಿದರೆಂದು ನನ್ನ ತಿಳಿವಳಿಕೆಯುಂಟು.

ಸಣ್ಣ ವಯಸ್ಸಿನಲ್ಲಿಯೇ ಮನುಷ್ಯನ ಶೀಲ ಸ್ವಭಾವಗಳ ವಿಕಾಸವಾಗುತ್ತದೆ. ಅಂಥ ವಯಸ್ಸಿನಲ್ಲಿ ಆತನಿಗೆ ಪರೋಪಕಾರ ಮಾಡಲಿಕ್ಕೆ ಅವಕಾಶ ಕೊಟ್ಟು ಅದರ ಅಭ್ಯಾಸವನ್ನು ಕಲಿಸಬೇಕಾಗುತ್ತದೆ. ತಮ್ಮ ಕಡೆಗೆ ಇದ್ದ ಒಂದು ಲವಂಗೀ ಬೀಡಿಯನ್ನು ತಮ್ಮ ನೆರೆಯವನಿಗೆ ಕೊಡುವದು ಅಥವಾ ಒಂದು ನಿಮಿಷ ಮಾತ್ರ ಬೇಕಾಗಲೊಲ್ಲದು. ತಮ್ಮ ಬೆಂಕಿ ಪೆಟ್ಟಿಗೆಯನ್ನು ಆತನ ಉಪಯೋಗಕ್ಕಾಗಿ ಕೊಡುವದು, ಇಲ್ಲವೇ ಕನಿಷ್ಪಪಕ್ಷಕ್ಕೆ ತಮ್ಮ ಬೀಡಿಯನ್ನು ಹೊತ್ತಿಸುವ ಸಲುವಾಗಿ ಕೊರೆದ ಕಡ್ಡಿಯನ್ನು ಆರಿಸುವ ಮೊದಲು ನೆರೆಯವನ ಬಾಯಲ್ಲಿಯ ಬೀಡಿಯ ಮುಂದೆ ಹಿಡಿಯುವದು ಮುಂತಾದ ಕೃತಿಗಳು ಸಣ್ಣವಾಗಿಯೇ ಕಾಣಿಸುವವು. ಆದರೆ ಸ್ವಲ್ಪ ವಿಚಾರ ಮಾಡಿದರೆ ಮನುಷ್ಯನ ಶರೋಪಕಾರ ವೃತ್ತಿಯ ವಿಕಾಸವಾಗಲಿಕ್ಕೆ ಇವುಗಳ ಉಪಯೋಗವು ಹೆಚ್ಚಾಗಿದ್ದುದು ಕಂಡುಬರುವದು.

ದೇಶಾಟನ ಮಾಡಿದ್ದರಿಂದ ಆಗುವ ಲಾಭಗಳನ್ನು ಕವಿಯು ಕೆಳಗಿನಂತೆ ತೋರಿಸಿರುವನು:—

"ದೇಶ ಸಂಚಾರದಿಂದ ಪಂಡಿತರ ಸಂದರ್ಶನ, ಪರನಾಡುಗಳ ದರ್ಶನ, ಅಲ್ಲಲ್ಲಿ ಹೊಸ ಹೊಸ ವಿಷಯಗಳ ಪರಿಚಯವಾಗಿ ಮನುಷ್ಯನು ಬುದ್ಧಿವಾನನಾಗಿ ಜ್ಞಾನವೃದ್ಧಿಯಾಗುವದು."

ಕವಿಯ ಈ ಹೇಳಿಕೆಯನ್ನು ನಾವಾದರೂ ಒಪ್ಪುತ್ತೇವೆ. ಆದರೆ ಮೋಟಾರಿನಲ್ಲಿ ಅಥವಾ ಉಗೆಬಂಡಿಯಲ್ಲಿ ಪ್ರವಾಸಮಾಡುವಾಗ್ಗೆ ಸುಮ್ಮನೆ ಖಿಡಿಕೆಯಲ್ಲಿ ಮೋರೆ ಹಾಕಿ ಹೊರಗಿನ ಮಿಂಚಿನಾಳ ಮರಡಿಯ ಕಡೆಗೆ ಅಥವಾ ಮುಗಿಲ ಕಡೆಗೆ ಶೂನ್ಯದೃಷ್ಟಿಯಿಂದ ನೋಡುತ್ತ ಕುಳಿತ ಗೃಹಸ್ಥರಿಗೆ ಕವಿಯು ಮೇಲೆ ವರ್ಣಿಸಿದ ಪ್ರವಾಸದ ಲಾಭಗಳು ದೊರಕುವದೆಂತು? ಅಂಥವರಿಗೆ ಜನರ ಪರಿಚಯವಾದರೂ ಹೇಗಾಗಬೇಕು? ಪರಿಚಯ ಮಾಡಿಕೊಳ್ಳಬೇಕೆಂದು ಇದಿರಿನಲ್ಲಿ ಕುಳಿತ ಗೃಹಸ್ಥನಿಗೆ 'ತಾವು ಯಾರು? ಎಲ್ಲಿಯವರು? ಎಲ್ಲಿ ಹೊರಟಿರಿ? ಯಾಕೆ ಹೊರಟಿರಿ?' ಮುಂತಾದ ಪ್ರಶ್ನೆಗಳನ್ನು ಸುರಿಸಿದರೆ ಆತನ ಪರಿಚಯವಾಗುವ ಬದಲಾಗಿ ಇಲ್ಲದ ಉಸಾಬರಿ ಮಾಡಿದ ಬಗ್ಗೆ ಮೊಸಡಿಯ ಪೂಜೆಯಾಗುವ ಸಂಭವವು ಹೆಚ್ಚು. ಆದರೆ ಇಂಥ ಗೊಡವೆಗೆ ಹೋಗದೆ ಕಿಸೆಯೊಳಗಿಂದ ಎರಡು ಬೀಡಿ ತೆಗೆದು ಒಂದನ್ನು ತಮ್ಮ ಬಾಯಲ್ಲಿ ಇಟ್ಟುಕೊಳ್ಳಬೇಕು. ಮತ್ತೊಂದನ್ನು ಆತನಿಗೆ ಕೊಡಹೋಗಬೇಕು. ಆದನ್ನು ಅವನು ಮುಗುಳುನಗೆ ಬೀರಿ ಸ್ವೀಕರಿಸಿದರೆ ನಮ್ಮ ಕೆಲಸ ಸಾಧಿಸಿತೆಂದು ತಿಳಕೊಳ್ಳಬೇಕು. ಬೀಡಿ ತಕ್ಕೊಳ್ಳದಿದ್ದರೆ ಕನಿಷ್ಪಪಕ್ಷಕ್ಕೆ ಆ ಗೃಹಸ್ಥನು ಆಭಾರ ಪ್ರದರ್ಶನವನ್ನಾದರೂ ಮಾಡುವನು. ಅದನ್ನೂ ಮಾಡದಿದ್ದರೆ ಕಡೆಗೆ ಇರುಳಿಳ ಎಮ್ಮೆಯಂತೆ ಕೋಡು ನೆವರಿಸಿ ನೈಮೇಲಾದರೂ ಬರಲಿಕ್ಕಿಲ್ಲ. ಇಂಥ ಪ್ರಸಂಗದಲ್ಲಿ ಆತನಬಣ್ಣ ತಿಳಿದುಕೊಂಡನು ಹೇಟಿ ಪ್ರಾರಂಭಿಸಲು ಅಡ್ಡಿಇಲ್ಲ. ಈ ರೀತಿಯಿಂದ ವಿದ್ವನ್‌ಮಣಿಗಳ ಕೂಡ ಸಂಭಾಷಣೆಯಾಗಿ ಮನುಷ್ಯನಿಗೆ ಜ್ಞಾನಪ್ರಾಪ್ತಿಯಾಗುತ್ತದೆ.

ಇತ್ತೀಚೆಗೆ ಸಮಾಜ ರಚನೆಯ ಬಗ್ಗೆ ಜನರ ವಿಚಾರಗಳಲ್ಲಿ ಬಹಳ ವೇಗದಿಂದ ಬದಲಾವಣೆಯಾಗಹತ್ತಿದೆ. ಸಮಾಜದಲ್ಲಿಯ ಉಚ್ಚ ನೀಚ ಭಾವಗಳು ನಾಮಶೇಷವಾಗಬೇಕು. ಇಪ್ಪೇ ಅಲ್ಲ, ವೃದ್ಧರು ತರುಣರು, ಗಂಡಸರು, ಹೆಂಗಸರು, ಬಡವರು, ಶ್ರೀಮಂತರು ಎಂಬ ಭೇದಭಾವಗಳು ಸಹ ಜನರಿಗೆ ಗ್ರಾಮ್ಯವೆನಿಸಹತ್ತಿವೆ. ಈ ಆಧುನಿಕ

ವಿಶ್ವದಲ್ಲಿ ಮೇಲೆ ಹೇಳಿದ ಭೇದ ಭಾವಗಳನ್ನು ನಷ್ಟಮಾಡಲಿಕ್ಕೆ ಬೀಡಿ ಬೆಂಕಿ ಪೆಟ್ಟಿಗೆಯ ಸಂಗಮದಂಥ ಬೇರೆ ರಾಮಬಾಣ ಉಪಾಯವು ಎಲ್ಲಿಯೂ ಸಿಗಲಾರದು. ಕೇವಲ ಅಮೃತ ಪಾನ ಮಾಡಿ ಉದರ ನಿರ್ವಾಹ ಮಾಡುವ ಇಂದ್ರಲೋಕದಲ್ಲಿ ದೇವತೆಗಳಲ್ಲಿಯೂ ಸಹ ಭೇದಭಾವಗಳಿರಬಹುದು. ಆದರೆ ಬೀಡಿ ಸೇದುವ ಮಾನವರಲ್ಲಿ ಆ ಭೇದಭಾವವು ಕಾಣಲಿಕ್ಕಿಲ್ಲ. ಯಾರು ಬೇಕಾದವರು ಬೇಕಾದವರ ಕಡೆಯಿಂದ ಬೀಡಿ ತಕ್ಕೊಳ್ಳಬಹುದು. ಮತ್ತು ಬೇಕಾದವರಿಗೆ ಕೊಡಬಹುದು. ಬೀಡಿ ಸೇದಲಿಕ್ಕೆ ಅಥವಾ ಹೊಗೆ ಬಿಡಲಿಕ್ಕೆ ಯಾವ ಸ್ಥಳದಲ್ಲಿಯೂ ಅಥವಾ ವೇಳೆಯಲ್ಲಿಯೂ ಅಡ್ಡಿ ಇಲ್ಲ. ಒಂದು ವೇಳೆ ಇದ್ದರೆ ಹಾಗಿರಬಾರದು. ಕೆಲವು ತರುಣರು ಬೀಡಿ ಬೆಂಕಿ ಪೆಟ್ಟಿಗೆಗಳ ಗೆಳೆತನವನ್ನು ಹೊಸದಾಗಿ ಮಾಡಿಕೊಳ್ಳುವಾಗ ಹಿರಿಯರಿಗೆ ಹೆದರುವರು. ಸಾಧಾರಣವಾಗಿ ಅವರು ಆ ನಾರೋಗ್ಯಕರವಾದ ಸ್ಥಳಗಳಲ್ಲಿ ಬೀಡಿ ಬೆಂಕಿ ಪೆಟ್ಟಿಗೆಗಳ ಪ್ರಥಮ ಭೇಟ್ಟಿಯನ್ನು ತಕ್ಕೊಳ್ಳುತ್ತಾರೆ. ಆದರೆ ಅಂಥ ಹಿರಿಯರಿಗೆ ಅಥವಾ ಆವರಿಗಂಜುವ ತರುಣರಿಗೆ ಒಂದು ವೇಳೆ ಈ ಹೊಸ ಸಂಸ್ಕೃತಿಯ ಮಹತ್ವವು ತಿಳಿಯಿತೆಂದರೆ ಈ ಭೇದಭಾವವು ಅಥವಾ ಈ ಭೀತಿಯು ತನ್ನಷ್ಟಕ್ಕೆ ತಾನೆ ಕಮರಿ ಹೋಗುವದು.

'ಜ್ಞಾನ ಭಂಡಾರ'ವೆಂದು ವಿಚಾರ ಮಾಡಲಾಗಿ ಒಂದೇ ಒಂದು ಬೀಡಿಯಲ್ಲಿ ಜ್ಞಾನವು ತುಂಬಿಕೊಂಡುದು ಕಂಡುಬರುವದು. ಮಧ್ಯಪ್ರಾಂತದಲ್ಲಿಯು ಗೊಂಡಿಯಾದ ಹತ್ತರದಲ್ಲಿರುವ ಅರಣ್ಯದಿಂದ 'ಬೀಡಿ ಎಲೆಗಳನ್ನು' ಬೆಳಗಾವಿ ಜಿಲ್ಲೆಯಲ್ಲಿ ನಿರ್ವಾಣಿ ಭಾಗದೊಳಗಿನ ತಂಬಾಕನ್ನೂ ಕೂಡಿಸಿ ಪುಣೆಯಲ್ಲಿ ಓಣಿ ಓಣಿಗಳಲ್ಲಿ ವಾಸಿಸುವ ಸ್ತ್ರೀ ಪುರುಷರ ಕಡೆಯಿಂದ ಸಣ್ಣ ದೊಡ್ಡ ಬೀಡಿಗಳನ್ನು ಕಟ್ಟಿಸಿ ಅವುಗಳಿಗೆ ಬೇರೆ ಬೇರೆ ಹೆಸರುಗಳನ್ನು ಕೊಟ್ಟು ಅವುಗಳನ್ನು ದೊಡ್ಡ ದೊಡ್ಡ ಶಹರು ಪಟ್ಟಣಗಳಲ್ಲಿ ಮಾರಲು ಬೇಕಾಗುವ ಶಾರೀರಿಕ ಶ್ರಮವು ದುಡ್ಡು, ಸಂಘಟನೆ ಮುಂತಾದವುಗಳನ್ನು ವಿಚಾರ ಮಾಡಿ ನೋಡಿದರೆ, ನಾವು ಚಿಕ್ಕಂದಿನಲ್ಲಿ ಓದಿದ ವಿಸ್ಮಯಕಾರಕ ಕಡಬಿನ ಕಥೆಯು Wonderful Pudding' ನೆನಪಾಗುತ್ತದೆ.

ಇಷ್ಟರ ಮೇಲೆಯೇ ಬೀಡಿಯ ಮಹತ್ವವು ತೀರುವಂತಿಲ್ಲ. ಆರ್ಥಿಕ, ವ್ಯವಹಾರಿಕ ಮತ್ತು ಮುಖ್ಯವಾಗಿ ಸಾಂಸ್ಕೃತಿಕ ದೃಷ್ಟಿಯಿಂದಾಗುವ ಬೀಡಿಯ ಲಾಭವನ್ನು ನಾವು ಹೇಳಿದೆವು. ಇನ್ನು ಕಲೆಯ ದೃಷ್ಟಿಯಿಂದ ಸಹ ಬೀಡಿಯ ವಿಚಾರ ಮಾಡಬಹುದು.

ಮದನ ಮಂಜರಿ
ಮಾತ್ರೆಗಳು
ಬಲಹೀನತೆ, ಮಲಬದ್ಧತೆ, ವೀರ್ಯಸ್ಖಲನ, ಧಾತುವಿಕಾರ ಮೊದಲಾದುವುಗಳನ್ನು ಶೀಘ್ರದಲ್ಲೇ ಪರಿಹರಿಸಿ, ರಕ್ತ ಮತ್ತು ವೀರ್ಯಗಳನ್ನು ಧಾರಾಳ ಹೆಚ್ಚಿಸಿ, ದೇಹಕ್ಕೆ ಶಕ್ತಿ, ಸ್ಫೂರ್ತಿ, ಉತ್ಸಾಹಗಳನ್ನು ಕೊಡುತ್ತದೆ.
ಕ್ರಯ: 40 ಮಾತ್ರೆಗಳ ಡಬ್ಬಿ ರೂ. 1—4—0
ಮದನಮಂಜರಿ ಫಾರ್ಮಸಿ.
184ನೇ ಬಜಾರ್ ರೋಡ್, ಮದ್ರಾಸ್.
ಪುಕ್ಕಟ್ಟೆ ಏಜಂಟರು:—ಸೈ ಪಾರ್ಕೆಸಿ.

ಕಸೆಯೊಳಗಿಂದ ಬೀಡಿ ತೆಗೆದು ಬಾಯಲ್ಲಿಟ್ಟುಕೊಳ್ಳುವದು ಒಂದು ಸಣ್ಣ ಕೆಲಸವಾದರೂ, ಬೀಡಿಯನ್ನು ತುಟಿಯಲ್ಲಿ ಹೇಗಿಟ್ಟುಕೊಳ್ಳಬೇಕು, ಎಡಗಡೆ ಮೂಲೆಯಲ್ಲಿಟ್ಟುಕೊಳ್ಳಬೇಕೋ ಬಲಗಡೆ ಮೂಲೆಯಲ್ಲಿಟ್ಟುಕೊಳ್ಳಬೇಕೋ, ಬಾಯಿಯಲ್ಲಿ ಬೀಡಿ ಇಟ್ಟು ಮಾತಾಡಲಿಕ್ಕೆ ಬರುವಷ್ಟು ಹಗುರಾಗಿ ಹಿಡಿಯಬೇಕೋ ಅಥವಾ ಘಟ್ಟಿಯಾಗಿ ಹಿಡಿಯಬೇಕೋ ಇತ್ಯಾದಿ ವಿಷಯಗಳಲ್ಲಿ ಕೌಶಲ್ಯವೂ ಉಂಟು. ಕಲೆಯೂ ಉಂಟು. ಬಾಯಲ್ಲಿ ಬೀಡಿ ಹಿಡಿಯುವ ರೀತಿಯು ಮೇಲಿಂದ ಆ ಮನುಷ್ಯನ ಸ್ವಭಾವ ಪರೀಕ್ಷೆಯನ್ನಾದರೂ ಒಮ್ಮೊಮ್ಮೆ ಮಾಡಲಿಕ್ಕೆ ಬರುವದು. ಅದೇ ಪ್ರಕಾರ ಹೊಗೆ ಬಿಡುವದಾದರೂ ಕೂಡ ಒಂದು ವಿಷಯವಾಗಿದೆ. ಒಮ್ಮೆಲೆ ಹೊಗೆಯ (ತುತ್ತ)ನ್ನು ಹೊರ ಬಿಟ್ಟು ಎಲ್ಲರ ತಲೆಯ ಮೇಲೆ ಹೊಗೆಯ ಮೋಡವನ್ನು ಕವಿಸುವರು. ಅಥವಾ ನಿಲ್ವಾಣದಿಂದ ಹೊಂಡುವ ತಯಾರಿಯಲ್ಲಿದ್ದ ಉಗೆಬಂಡಿಯ ಇಂಜನ್‌ದಂತೆ 'ಭುಶ್ ಭುಶ್ ಭುಶ್' ಹೀಗೆ ಸ್ವರ ತೆಗೆಯುತ್ತ ಸ್ವಲ್ಪ ಸ್ವಲ್ಪ ಹೊಗೆ ಬಿಡುವದು, ಅಥವಾ ಬಾಯಲ್ಲಿ ಸ್ವಲ್ಪ ಸ್ವಲ್ಪೇ ಹೊಗೆ ತಕ್ಕೊಂಡು ಅದನ್ನೇ ಕಲ್ಲು ಸಕ್ಕರೆಯ ಹರಳಿನಂತೆ ಬಹಳ ಹೊತ್ತಿನ ವರೆಗೆ ಇಟ್ಟುಕೊಳ್ಳುವದು, ಇವೆಲ್ಲ ಕಲಾಕೃತಿಗಳು ಮತ್ತು ಇದರಿಂದ ಬೀಡಿ ಭಕ್ತರು ಹೇಗೆ ಬರಬರುತ್ತ ಕಲೋಪಾಸಕರಾಗುತ್ತಾರೆಂಬುದನ್ನು ನಮ್ಮ ನಿದರ್ಶನಕ್ಕೆ ತಂದುಕೊಡುತ್ತವೆ.

ಬೀಡಿ ಸೇದುವ ಅಭ್ಯಾಸವಿತ್ತೆಂದರೆ ಒಮ್ಮೊಮ್ಮೆ 'ಬೀಡಿ ಚುಂಬನ' ಉದ್ಭವಿಸುತ್ತದೆ. ನಮ್ಮ ಮುಂದೆಯೇ ಒಬ್ಬ

ಗೃಹಸ್ಥನು ಬೀಡಿ ಸೇದುತ್ತ ಕುಳಿತಿರುವನೆಂದು ಕಲ್ಪಿಸುವಾ ಅದನ್ನು ನೋಡಿ ನಮಗೂ ಕೂಡ ಬೀಡಿ ಸೇದುವದು ನೆನಪಾಗುತ್ತದೆ. ಕೂಡಲೆ ಕಿಸೆಯೊಳಗಿಂದ ಒಂದು ಬೀಡಿ ತೆಗೆಯುವೆವು. ಆದರೆ ದುರ್ದೈವದಿಂದ ನಮ್ಮಲ್ಲಿ ಕಡ್ಡಿ ಇರಬಾರದು ಅಥವಾ ನಮಗೆ ತಿಳಿಯದೆ ನಮ್ಮ ಪೆಟ್ಟಿಗೆಯು ಖಾಲಿ ಆಗಿರಬೇಕು. ಇಂತಹ ದುರ್ಧರ ಪ್ರಸಂಗದಲ್ಲಿ ನಾವು ನಮ್ಮ ಸುತ್ತಮುತ್ತ ನೋಡಹತ್ತುವೆವು. ನಮ್ಮ ಹಾವಭಾವಗಳನ್ನು ನೋಡಿ ನಮಗೊದಗಿದ ಸಂಕಟ ಪ್ರಸಂಗವನ್ನು ಇದಿರಿನಲ್ಲಿ ಕುಳಿತ ಭಕ್ತನು ಕೂಡಲೇ ಕಂಡು ಹಿಡಿಯುವನು. ನಿತ್ಯದ ಪರೋಪಕಾರ ವೃತ್ತಿಗನುಸಾರವಾಗಿ ಆ ಗೃಹಸ್ಥನು ತನ್ನ ಬೆಂಕಿಪೆಟ್ಟಿಗೆಯನ್ನು ನಮಗೆ ಕೊಡಬೇಕೆಂದು ಹುಡುಕಹತ್ತುವನು. ಆದು ಅವನಿಗೆ ಸಿಗುವದಿಲ್ಲ. ಸಿಕ್ಕರೂ ಅದರಲ್ಲಿ ಕಡ್ಡಿಗಳಿರುವದಿಲ್ಲವೆಂದು ತಿಳಿಯೋಣ. ಇಂಥ ಬಿಕ್ಕಟ್ಟಿನ ಪ್ರಸಂಗದಲ್ಲಿ ನಮ್ಮನ್ನು ಎಳ್ಳಷ್ಟೂ ಎದೆಗುಂದಿಸದೆ, ಯಾರ ಬಾಯಲ್ಲಿ ಹೊತ್ತಿದ ಬೀಡಿ ಇರುವದೋ ಆ ಗೃಹಸ್ಥನು ಪ್ರೇಮದಿಂದ ಬಾಗಿ ನೋರೆ ಮುಂಬಕ್ಕೆ ಮಾಡುವನು. ಆ ವೇಳೆಗೆ ನಾವಾದರೂ ನಮ್ಮ ಬಾಯಲ್ಲಿ ಹೊತ್ತಿದ್ದ ಬೀಡಿ ಇಟ್ಟುಕೊಂಡು ಅತ್ಯಂತ ಆದರದಿಂದ ಬಾಗುವೆವು. ಈ ಕ್ರಿಯೆಯಲ್ಲಿ ಎರಡು ಬೀಡಿಗಳ ತಲೆಗಳು ಒಂದಾಗುವವು. ಮತ್ತು ಇಬ್ಬರೂ ಒಂಬೇ ವೇಳೆಗೆ ಶ್ವಾಸ ಜಗ್ಗಿದರೆ ೫-೬ ಸೇಕಂದಿನಲ್ಲಿ ನಿರ್ಜೀವ ಬೀಡಿ ಸಜೀವವಾಗುವದು. ಮುಂದೆ ಎರಡೂ ಬಾಯಿಗಳೊಳಗಿಂದ ಹೊಗೆಯು ಹಾಯಹತ್ತುವದು. ಈ ರೀತಿ ಬೀಡಿ ಹೊತ್ತಿಸುವದಕ್ಕೆ ನಾವು 'ಬೀಡಿ ಚುಂಬನ' ವೆಂದು ಕರೆಯುವೆವು. ಇದರಲ್ಲೇನು ತಪ್ಪು?

ಇನ್ನು, ಬೇಕಾದಂಥ ಚಲೋ ಪದಾರ್ಥಕ್ಕೂ ಕೂಡ ಹೆಸರಿಡುವಂಥ ಸರ್ವಜ್ಞರು ಜಗತ್ತಿನಲ್ಲಿ ನೇಕರುಂಟು. ಇಂಥ ಜನರು ಬೀಡಿ ಸೇದುವವರ ಕಡೆಗೆ ವಕ್ರ ದೃಷ್ಟಿಯನ್ನು ಬೀರುವರು. ಅವರು ಯಾವಾಗಲೂ ಮಾಡುವ ತಕರಾರುಗಳೆಂದರೆ ಬೀಡಿ ಸೇದುವವನು ಬೇಕಾದಾಗ ಬೇಕಾದಲ್ಲಿ ಕೆಮ್ಮುವನು. ಉಗುಳುವನು. ಹೊಗೆ ಬಿಡುವನು ಮತ್ತು ತನ್ನ ಈ ಸೊಗಡುತನದಿಂದ ಎರಡನೆಯವರಿಗೆ ತೊಂದರೆಯಾಗಬಹುದೆಂಬು ಕಲ್ಪನೆಯೂ ಕೂಡ ಅವನಿಗಿರುವದಿಲ್ಲ; ಇಷ್ಟು ಸಂಸ್ಕೃತಿಹೀನನಾಗುತ್ತಾನೆ. ಬೀಡಿ ಸೇದುವ ಭಕ್ತರು ಆಲ್ಲಲ್ಲಿ ಬೂದಿಚಟಕಿಹೊಡೆಯುತ್ತ, ಬೇಕಾದಲ್ಲಿ ಹತ್ತರವಿದ್ದ ಬೀಡಿ ಕಡ್ಡಿಗಳನ್ನು ಒಗೆಯುತ್ತ, ಮತ್ತು ಬಾಯೊಳಗಿನ ಹೊಗೆಯಿಂದ ಸುತ್ತಮುತ್ತಲಿನ ಹವೆಯನ್ನು ಕೆಡಿಸುತ್ತ, ಜನರ ಸೋಯಿ ಗೈರಸೋಯಿಗಳನ್ನು ಲಕ್ಷ್ಯಕ್ಕೆ ತಾರದೆ ಜಗತ್ತಿನಲ್ಲಿ ಆಲೆಯುತ್ತಾರೆ. ಇದು ಅವರ ಮೇಲೆ ಹೊರಿಸುವ ಮತ್ತೊಂದು ಆರೋಪ. ಆದರೆ ನಾವು ಮೇಲೆ ಹೇಳಿದಂತೆ ಈ ಕಲಿಯುಗದಲ್ಲಿ ದೇವರಿಗೂ ಕೂಡ ಹೆಸರಿಡುವ ಜನರಿದ್ದಾರೆ. ಅಂದ ಮೇಲೆ ಬೀಡಿ ಸೇದುವವರ ಮೇಲೆ ಪುಷ್ಪಗಳೇರಿದರೆ ಇದರಲ್ಲಿ ಆಶ್ಚರ್ಯವೇನು? ಒಂದು ವೇಳೆ ಬೆಂಕಿ ಕಡ್ಡಿಯು ಹತ್ತರವಿದ್ದರೆ ಅದರ ಉಪಯೋಗ ಮಾಡಿ ಪಂಚ ಪಕ್ವಾನ್ನಗಳ ಭೋಜನವನ್ನು ತಯಾರಿಸಬಹುದು. ಅದಂತೆ ಅದೇ ಕಡ್ಡಿಯಿಂದ ಮೃತ ದೇಹಕ್ಕೆ ಅಗ್ನಿ ಸಂಸ್ಕಾರವನ್ನು ಮಾಡಬಹುದು, ಅಥವಾ ಒಬ್ಬರ ಮನೆಗೆ ಹಚ್ಚಲಿಕ್ಕೂ ಬರುವದು. ಇಷ್ಟರ ಮೇಲಿಂದಲೇ ನಾವು ಪದಾರ್ಥ ಯಾವದೇ ಇದ್ದರೂ ಅದನ್ನು ಉಪಯೋಗ ಮಾಡುವವನ ಮೇಲೆ ಅದು ಚಲೋ ಅಥವಾ ಕೆಟ್ಟ ಎಂಬುದು ಅವಲಂಬಿಸಿರುತ್ತದೆ. ಎಂದು ನಾವು ಉಪದೇಶ ಮಾಡಬಹುದು. ಇದರ ಮೇಲಿಂದ ಹಿಂದು - ಮುಂದಿನ ವಿಚಾರ ಮಾಡದೆ ಬೀಡಿ ಸಂಸ್ಕೃತಿಗೆ ಹೆಸರಿಡುವದು ಮೂರ್ಖವನವಾಗುವದೆಂದು ಪ್ರತಿಯೊಬ್ಬನು ಲಕ್ಷದಲ್ಲಿಡತಕ್ಕದ್ದು!!!

(ಕ. ವೈ.)

ನೋಟೀಸು,

ಕುಂದಾಪುರ ಡಿ. ಮು. ಕೋರ್ಟನಲ್ಲಿ O.S. 282/1943

ಕ್ರಮ ಅಮ್ಲಜ್ಯಾರಿ ನಂ. 319/1944

ವಾದಿ-ನಗರ ಮಾಧವನ್ಮಾಕಾ ಪೋತಿ, ಯೀತನ ವಾರ್ಸಿದಾರ ಹಿರೇಮಗ. ಕುಟುಂಬದ ಈಗಿನ ಎಜಮಾನ ವ ಆಡಳಿತೆಗಾರ ಮಧೂಸೂಧನನ್ಮಾಕಾ— ಅರ್ಜಿದಾರ

ಪ್ರತಿವಾದೀರು— ಭವಾನಿ ಯಾನೆ ಲಕ್ಷ್ಮೀದೇವಿಬಾಯಿ ಕೂಡಾ 4ಜನರು— ಎದ್ರಿರು

1ನೇ ಪ್ರತಿವಾದಿ ಭವಾನಿ ಯಾನೆ ಲಕ್ಷ್ಮೀದೇವಿಬಾಯಿಗೆ. 4ನೇ ಪ್ರತಿವಾದಿ ಶ್ಯಾಂತಾಬಾಯಿಗೆ ಸಹಾ ಅರ್ಜಿದಾರನು ಸದ್ರಿ O.S. 282/1943ನೇ ಸದ್ರಿ ಡಿಕ್ರಿಯ ಅಮಲ್ಜಾರಿಯ ಬಗ್ಗೆ ಈ ಕೋರ್ಟಿಗೆ ಅರ್ಜ ಮಾಡಿಕೊಂಡಿದ್ದಾನೆ. ಆದುದರಿಂದ ಅಮಲ್ಜಾರಿಯು ಯಾಕೆ ನಡಿಸಕೂಡದು ಎಂಬುದಕ್ಕೆ ಸಬಬು ತೋರಿಸಲಿಕ್ಕೆ 1944ನೇಯ್ಸವಿ ಅಕಟೆಂಬ್ರ ತಾ. 10ನೇ ತಾರೀಕಿನಲ್ಲಿ ಯೀ ಕೋರ್ಟುಮುಂದೆ ನೀವು ಹಾಜರಾಗಬೇಕೆಂತ ಯದರಿಂದ ನಮಗೆ ನೋಟೀಸು ಕೊಡೋಣಾದ್ದು.

ಕೋರ್ಟು ಹುಕ್ಕಂ ಪ್ರಕಾರ,

S. N. Acharya

ಅರ್ಜಿದಾರನ ಕಡೆ ಎಡ್ವೊಕೇಟು

ಕುಂದಾಪುರ ತಾರೀಕು 22-9-44

ವಾರ ಭವಿಷ್ಯ

ತಾ. ೩-೧೦-೪೪ರಿಂದ ೧೦-೧೦-೪೪

ಮೇಷ:—ಶಕ್ತಿ ಸಾಹಸಗಳಿಂದ ಶಕ್ಯವಾದ ಕಾರ್ಯವನ್ನು ಹೆದರದ ಅಪೇಕ್ಷೆಯಿಲ್ಲದೇನೇ ಸ್ವಯಂ ಕೊನೆಗಾಣಿಸಲು ಶಕ್ತರಿರುವಿರಿ. ಉಮೇದ್ವಾರೀ ತರುಣ ಜನವೃಂದಕ್ಕೆ ಈ ವಾರವು ಅತ್ಯುತ್ತಮವಿದೆ. ಶತ್ರುಗಳು ಶರಣಾಗತರಾಗುವರು. ವಿದ್ಯೋಪಜೀವಿಗಳಿಗೂ ವ್ಯಾಪಾರಿಗಳಿಗೂ ಸದ್ಯದ ಸಮಯವು ಪ್ರತಿಕೂಲವಿದೆ. ತಾ. 3, 8, 9 ಈ ದಿನಗಳು ಅನುಕೂಲವಿವೆ.

ವೃಷಭ:—ಕಳದ ವಾರಕ್ಕಿಂತ ವಿಶೇಷ ಅಭ್ಯಂತರವೇನೂ ಈ ವಾರದಲ್ಲಿ ಕಾಣದು. ದುಡ್ಡಿನ ಅಡಚಣೆ ಹೆಚ್ಚುವುದು. ರೋಗಪೀಡೆ, ಶತ್ರುಭಯ, ಮಕ್ಕಳ ಸಂಬಂಧೀ ಶೋಕ ಇವುಗಳು ಹೆಚ್ಚಲಿವೆ. ಬಂಧುಜನರಿಂದ ಮನಸ್ತಾಪವುಂಟಾದೀತು. ತಾ. 4, 5 ಈ ದಿನಗಳು ಕೊಂಚ ಉತ್ತಮವಿರುವುದರಿಂದ ಮಿತ್ರ ಸಹಾಯ, ಧನಲಾಭ, ವಿಜಯ, ಗೃಹಸುಖ ಲಭಿಸುವದು.

ಮಿಥುನ:—ದೈವವು ನಿಮುಖವಾಗಿರುವದು. ಬೆಂಕಿ ಮತ್ತು ವಿಷಪ್ರಾಣಿಗಳಿಂದ ಅಪಾಯವುಂಟಾದೀತು. ಸ್ವಜನರ ವಿಯೋಗದಿಂದಲೂ ವೃಥಾ ಪರ್ಯಟನದಿಂದಲೂ ಹಣದ ಮುಗ್ಗಟ್ಟಿನಿಂದಲೂ ಮನಸ್ಸು ಹೆಚ್ಚಿನ ಶೋಕಕ್ಕೀಡಾಗಲಿದೆ. ಅದರೂ ತಾ. 3, 5, 7 ಈ ದಿನಗಳಲ್ಲಿ ಅಸುರ ಗುರುಗಳ ಕೃಪೆಯಿಂದ ಹೆಚ್ಚಿನ ಕಷ್ಟ ನಷ್ಟಗಳಾಗಲಾರವು.

ಕರ್ಕಾಟಕ:—ಅದೃಷ್ಟವು ಬಲವತ್ತರವಿದೆ. ಏಳೂವರೆ ಶನಿಯಕಾಟವು ಆಗಾಗ್ಗೆ ತೋರಿ ಬಂದರೂ ಹೆಚ್ಚಿನ ಹಾನಿಗೊಳಗಾಗಲಾರಿರಿ. ನೆನೆದುದಕ್ಕಿಂತಲೂ ಅಧಿಕವಾದ ಫಲವನ್ನು ಹೊರದುವಿರಿ. ಸರ್ವತ್ರ ಸ್ಥಾನಮಾನಗಳು ಲಭಿಸುವವು. ನಿಶ್ಚಿಂತರಾದ ನಿಮಗೆ ತಾ. 4, 5, 8 ಈ ದಿನಗಳಲ್ಲಿ ವಿಶೇಷತಃ ಭೋಗ, ಸುಖ ವಿಜಯಗಳಿವೆ.

ಸಿಂಹ:—ಪರಸ್ತ್ರೀ ಮುಖದಿಂದ ಧನಲಾಭಯೋಗವಿದೆ. ಕುಟುಂಬ ಸುಖವು ಅತ್ಯುತ್ತಮವಿರುವದು. ಮನಸ್ಸು ಕಠಿಣವಾಗುವುದರಿಂದ ಕೆಲವರೊಡನೆ ವೃಥಾ ಕಲಹ ಬೆಳೆದೀತು. ಅಧಿಕಾರಿಗಳಪೀಡೆ, ಆರ್ಥಿಕ ದುರವಸ್ಥೆ ಮತ್ತು ಪಿತ್ತೋಷ್ಣ ವಿಕಾರದಿಂದ ಅನಾರೋಗ್ಯಕ್ಕೊಳಗಾದ ನಿಮಗೆ ತಾ. 3, 6, 8 ಅನುಕೂಲವಿರುವವು.

ಕನ್ಯಾ:—ದೇಹಕ್ಕೂ ಮನಸ್ಸಿಗೂ ಕಿಂಚಿತ್ತೂ ಸುಖವಿರದು. ಆಕಸ್ಮಿಕ ಪ್ರವಾಸಗಳು ಗಂಟು ಬಿದ್ದು ನಾನಾ ತರದ ದುಃಖಗಳಿಗೀಡುಮಾಡಲಿವೆ. ಸೈಕಲ್ ಮೋಟರ್ ಮುಂತಾದ ವಾಹನಾದಿಗಳ ಯಾನಗಳಲ್ಲಿ ಹೆಚ್ಚಿನ ದೇಹಾಪಾಯ ಸಂಭವಿಸುವ ಯೋಗವಿದೆ. ದುಡ್ಡಿನ ತಗಾದೆಯಂತೂ ಹೇಳತೀರದು ಇಂತಹ ನಿಮಗೆ ತಾ. 6, 7, 8 ಬಹಳ ಅನಿಷ್ಟಕಾರಿಯಾಗಿವೆ.

ತುಲಾ:—ಸ್ವಧರ್ಮೋಚಿತ ಕರ್ಮಾನುಯಾಯಿಗಳಿಗೆ ಈ ವಾರವು ಮುಂಚಿನಂತೆಯೇ ಶುಭಫಲದಾಯಿಯಾಗಿ ಪರಿಣಮಿಸಲಿದೆ. ನಿದ್ರಾಭಂಗ, ನೇತ್ರರೋಗ, ಸ್ತ್ರೀಕಲಹ ಇತ್ಯಾದಿಗಳು ಆಗಾಗ ಕಾಣಬಹುದು. ವಿದ್ಯಾರ್ಥಿಗಳಿಗೂ ವ್ಯಾಪಾರಿಗಳಿಗೂ ನೌಕರ ಲೇಖಕ ಮೊದಲಾದವರಿಗೂ ಈ ವಾರವು ಅತ್ಯುತ್ತಮವಿದೆ. ತಾ. 4, 5, 6, 7 ಅತ್ಯುತ್ತಮ.

ವೃಶ್ಚಿಕ:—ನಿಮ್ಮ ಲಾಭಸ್ಥಾನವು ಗ್ರಹರನೇಕರಿಂದ ತುಂಬಿರುವುದು. ಮುಂಚಿನ ಸಾಲಕಡಗಳಿಂದ ಮುಕ್ತರಾಗಿ ಕೈಯಲ್ಲಿ ನಾಲ್ಕು ಕಾಸನ್ನುಗಳಿಸುವಿರಿ. ಯಾವ ಮಹತ್ತರವಾದ ಕಾರ್ಯವೇ ಇರಲಿ, ಮುಂದಿಟ್ಟ ಹೆಜ್ಜೆಯನ್ನು ಹಿಂತೆಗೆಯಲಾರಿರಿ. ತಾ. 3, 4, 5 ಈ ದಿನಗಳಲ್ಲಿ ಸ್ವಕೀಯರಿಂದ ವಿರಹವುಂಟಾದೀತು.

ಧನು:—ಹಿಂದಿಗಿಂತ ಕೊಂಚ ಉತ್ತಮ ಸ್ಥಿತಿಗೆ ಬರಲಿರುವಿರಿ. ಆದರೆ ಹಿಡಿದ ಕಾರ್ಯಗಳಲ್ಲಿ ಹೆಚ್ಚಿನವು ಸಫಲಗಳಾಗಲಾರವು. ಒಂದರ ಹಿಂದೊಂದರಂತೆ ಆಪತ್ತುಗಳು ಬರಲಿವೆ. ಮನಸ್ಸಿಗೆ ಶಾಂತಿಯಿರದು. ಮೌನಿಗೂ ಕೂಡ ಕಲಹವಾದೀತು. ವಾರದ ಆದ್ಯಂತ ದಿನಗಳಲ್ಲಿ ಸ್ತ್ರೀ ಧನಲಾಭ, ಇಷ್ಟಸಿದ್ಧಿ, ಸುಖಗಳಿವೆ.

ಮಕರ:—ವಿಶೇಷತಃ ಆರೋಗ್ಯ ವಿಚಾರದಲ್ಲಿ ಜಾಗರೂಕತೆ ವಹಿಸತಕ್ಕದ್ದು. ಅನಿವಾರ್ಯ ಪ್ರಸಂಗಗಳಲ್ಲಿ ಪ್ರಯಾಣಮಾಡಿದರೂ ಕಷ್ಟತಪ್ಪಲೊಲ್ಲದು. ಸ್ತ್ರೀ ಸುಖ, ವಸನಧನಲಾಭ, ವಿಜಯಾದಿಗಳನ್ನು ಆಗಾಗ ಕಾಣುವಿರಿ. ದ್ಯೂತಾದಿಗಳಲ್ಲಿ ಗೆಲುವಿದೆ. ವಾರಾದಿಯ 3 ದಿನಗಳು ಉತ್ತಮವಿರುವವು.

ಕುಂಭ;—ಸುರಾಸುರ ಗುರುಗಳು ನಿಮಗೆ ಅನುಕೂಲರಿರುವರು. ವಿದ್ಯೋಪಜೀವಿಗಳಿಗೂ ಉತ್ತಮ ವರ್ಣೀಯರಿಗೂ ಈ ವಾರವು ಶುಭ ಫಲದಾಯಿಯಿದೆ. ಶಕ್ತಿಸಾಹಸ ಸಾಧ್ಯಕಾರ್ಯಗಳಲ್ಲಿ ಪರಾಭವ ಹೊಂದುವಿರಿ. ವಿರೋಧಿಗಳಿಂದ ಧನಮಾನಗಳಿಗಪಾಯವಿದೆ. ತಾ. 4, 5, 6, 7 ಅನುಕೂಲದಿನಗಳು.

ಮೀನ:—ದಿನದಿಂದ ದಿನಕ್ಕೆ ನಿಮ್ಮ ಅದೃಷ್ಟವು ಜವನತಿಗೆ ಬರುತ್ತಿದೆ. ಶತ್ರುಪೀಡೆ, ಹಣದತಗಾದೆ, ಕಾರ್ಯಹಾನಿ, ಆತ್ಮೀಯರ ವಿರೋಧ. ಸಕಲ ಉದ್ಯಮಗಳಲ್ಲೂ ನಷ್ಟ ಇತ್ಯಾದಿಗಳಿಂದ ಮನಸ್ಸು ಸುಖವೆಂಬುದನ್ನೇ ಕಂಡರಿಯದು. ಗಂಡಹೆಂಡಿರೊಳು ಆನುದಿನ ಕಲಹ ತಪ್ಪಲೊಲ್ಲದು. ವಾರಾಂತ್ಯದ 4 ದಿನಗಳು ಮುಂಚಿನಷ್ಟು ಅನಿಷ್ಟಕಾರಿಗಳಲ್ಲ.

BHUVNENDRA PRODUCTS LIMITED.

[illegible]

DEPOT

[illegible] Galli, [illegible]

"BHUVANENDRA"

GARBHAPAL

Tried and appreciated by eminent Doctors. Proved to be the best remedy where even allopathic medicines failed. A specific for threatened or habitual abortion and other uterine troubles, Must be commenced soon after conception and continued up to the time of delivery,

Our stockists at Udipi—1 Dr. Nayak's consulting Rooms & Pharmacy. 2. Dr. P.G. Achar's Pharmacy 3. Dr. K. Sheshagiri Pai, L. I. M. 4. Dr.K. Venkat Rao, 5. R. S. Shenai. 6. Navabharath Book Depot

[illegible] ಔಷಧಗಳು.

[illegible]	[illegible]
[illegible]	₹ 3-0
ಪ್ರಾಕ್ಸ್ಟಾಪಸ್ (ಶಕ್ತಿವರ್ಧಕ)	3-0-0
ಋತೋಕಾರಿಷ್ಟ (ಪ್ರ.ಶು.ಕಾಲಕ್ಕೆ	3-0-0
ಧಾತುಪುಷ್ಟಿ ಲೇಹ (ಶಕ್ತಿ ವರ್ಧಕ	3-8-0
[illegible]	[illegible]
[illegible]	10-0-0
ಚ್ಯವನಪ್ರಾಶ ಲೇಹ (ಪೌಷ್ಟಿಕ)	3-8-0
ಮಾತುಲಿಂಗ ರಸಾಯನ (ರಕ್ತಶುದ್ಧಿಗೆ)	5-0-0
ಮೇಹಕುಠಾರ	3-8-0
ಆಮಲಕೀ ತೈಲ	0-14-0
ಪಿತ್ತಹಾರಿ ತೈಲ	1-12-0
ಹಿಮಸಾಗರ ತೈಲ	2-4-0
ಮಲೇರಿಯಾ ನಿವಾರಿಣಿ	2 8-0

ಪ್ಯಾಕಿಂಗ್ ಮತ್ತು ಟಪ್ಪಾಲು ಖರ್ಚು ಪ್ರತ್ಯೇಕ.

ಇತರ ಆಯುರ್ವೇದ ಔಷಧಗಳೂ ದೊರೆಯುತ್ತವೆ.

ನವಭಾರತ ಪುಸ್ತಕ ಭಂಡಾರ, ಉಡುಪಿ.

ಸುಲಭ ಉಪಾಯ - - - -?

ಮಾಸ್ತರ್—ದೇಜಪ್ಪ, ಬೊಂಬಾಯಿಯಲ್ಲಿ ಮೊದಲಿದ್ದ ಆಫೀಸಿನಲ್ಲೇ ಈಗಲೂ ಇದ್ದೀಯಾ? ಮೆನೇಜರರು ಏನಾದರೂ ಸಂಬಳ ಏರಿಸಿದ್ದಾರೆಯೆ?

ದೇಜಪ್ಪ—ಸ್ವಲ್ಪ ಏರಿಸಿದ್ದಾರೆ. ನನಗೆ ಒಂದಿಷ್ಟು ಇಂಗ್ಲಿಷು ಬರುತ್ತಿದ್ದರೆ ಇನ್ನೂ ಹೆಚ್ಚಿಗ ಕೊಡುತ್ತಿದ್ದರು. ಅವರು ಪಾಸುಗೀಸು ಕೇಳೋದಿಲ್ಲ. ಸಾಧಾರಣ ಇಂಗ್ಲಿಷು ಬಂದರಾಯಿತು.

ಮಾಸ್ತರ್—ಅಷ್ಟೇ ತಾನೆ! ಹಾಗಾದರೆ ನಿನ್ನ ಸಂಬಳ ಏರಲಿಕ್ಕೆ ಸುಲಭಉಪಾಯವಿದೆ. 'ಸುಲಭದಲ್ಲಿ ಇಂಗ್ಲಿಷು' ಎಂಬ ಪುಸ್ತಕವನ್ನು ಅಭ್ಯಾಸ ಮಾಡು. ಯಾರ ಹೆಂಗೂ ಇಲ್ಲದೆ ಇಂಗ್ಲಿಷು ಬರುವುದು. ಸಂಬಳ ಏರುವುದು?

ದೇಜಪ್ಪ—ಇಂಗ್ಲಿಷು ಭಾಷೆಯ ಗುಟ್ಟನ್ನು ಅಷ್ಟು ಸುಲಭವಾಗಿ ಹೇಳಿದ್ದಾರೆಯೇ ಆ ಪುಸ್ತಕದಲ್ಲಿ.

ಮಾಸ್ತರ್—ಆ ಪುಸ್ತಕವನ್ನು ಅಭ್ಯಾಸಿಸಿದರೆ ಬಾಳೆಯ ಹಣ್ಣು ಸುಲಿದು ತಿಂದಷ್ಟು ಸುಲಭವಾಗಿ ಇಂಗ್ಲಿಷು ಬರುತ್ತದೆ. **ನವಭಾರತ ಪುಸ್ತಕ ಭಂಡಾರ, ಉಡುಪಿ, ಅಲ್ಲಿ ಸಿಗುತ್ತದೆ. ಬೆಲೆ ೧-೪-೦** ಇಂಗ್ಲಿಷನ್ನು ಕಲಿಸಿ ಕಲಿಸಿ ನುರಿತ ಉದಾಧ್ಯಾಯರೊಬ್ಬರು ಬರೆದ ಪುಸ್ತಕ ಅದು. ಗಿಳಿಗೆ ಮಾತು ಕಲಿಸಿದಂತೆ ಇಂಗ್ಲಿಷಿನಲ್ಲಿ ನಾಲ್ಕು ಮಾತಾಡಲಿಕ್ಕೆ ಕಲಿಸುವ ಪುಸ್ತಕವಲ್ಲ. ಸ್ವತಂತ್ರವಾಗಿ ಮಾತಾಡುವ ಸಾಮರ್ಥ್ಯ ಬರುವಂತೆ ಕ್ರಮವಾಗಿ ಕಲಿಸಿಕೊಡುವ ಪುಸ್ತಕ ಅದು. ನೀನದನ್ನು ಅವಶ್ಯವಾಗಿ ಅಭ್ಯಾಸಮಾಡಬೇಕು.

ದೇಜಪ್ಪ—ಆಗಲಿ ಸ್ವಾಮೀ, ನೀವು ಸಿಪಾರಸು ಮಾಡಿದ ಮೇಲೆ ಆ ಪುಸ್ತಕದಿಂದ ನನಗೆ ಪ್ರಯೋಜನವಾಗುವುದು ಖಂಡಿತ. ಇದೇ ಕೊಂಡುಕೊಳ್ಳುತ್ತೇನೆ.

Printed and published by K. H.Shetty at the Navayuga Press, Udipi.